Volume : 9 | Issue : 157 | September : 06 : 2026 : Sunday
ಸಂಪುಟ : 9 | ಸಂಚಿಕೆ : 157 | ಸೆಪ್ಟಂಬರ್ : 06 : 2026 : ಭಾನುವಾರ

www.VIKRAMAVAHINI.com

ಸತ್ಯದ ಹಾದಿ । ಜನಪರ ದನಿ । ರಾಷ್ಟ್ರೀಯ ದೃಷ್ಟಿ

# ವಿಕ್ರಮ ವಾಹಿನಿ

ಪುಟ 4 | ₹2 | ಕನ್ನಡ ದಿನಪತ್ರಿಕೆ

VIKRAMA VAHINI
PRGI NO: KARKAN/2018/78481





‘ಎಪಿಕ್’ ಚಿತ್ರದ ಟ್ರೇಲರ್ ಬಿಡುಗಡೆ ಸಮಾರಂಭದಲ್ಲಿ ತೆಲಂಗಾಣ ಶೈಲಿಯಲ್ಲಿ ಮಾತನಾಡಿದ ನಟಿ ರಶ್ಮಿಕಾ ಮಂದಣ್ಣ ಅವರ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದ್ದು, ಅಭಿಮಾನಿಗಳ ಮೆಚ್ಚುಗೆ ಜೊತೆಗೆ ಟೀಕೆಗೂ ಗುರಿಯಾಗಿದೆ.

ಕಾಂಗ್ರೆಸ್ ಸರ್ಕಾರ ಜಾಹೀರಾತಿಗೆ ಸೀಮಿತ; | ಪುಟ 3

‘ನಾಡಿನ ದೊರೆ’ ಎನ್ನಬೇಡಿ, ‘ಪ್ರಜಾಸೇವಕ’ ಎನ್ನಿ | ಪುಟ 4

## ■ ಸುದ್ದಿ ಚುಟುಕು

### ಪಾಕಿಸ್ತಾನ ಆಲೌಟ್

● ವಿಕ್ರಮ ವಾಹಿನಿ । ದುಬೈ

ಮಹಿಳಾ ಏಷ್ಯಾಕಪ್ 2026ರ ಗ್ರೂಪ್ ‘ಎ’ ಪಂದ್ಯದಲ್ಲಿ ಭಾರತ ತಂಡ ಪಾಕಿಸ್ತಾನವನ್ನು ಕೇವಲ 55 ರನ್‌ಗಳಿಗೆ ಆಲೌಟ್ ಮಾಡಿ, ಬಳಿಕ 8.4 ಓವರ್‌ಗಳಲ್ಲಿ ಗುರಿ ಬೆನ್ನಟ್ಟಿ 7 ವಿಕೆಟ್‌ಗಳ ಭರ್ಜರಿ ಜಯ ದಾಖಲಿಸಿದೆ.

ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಆಯ್ದುಕೊಂಡ ಪಾಕಿಸ್ತಾನ ಆರಂಭದಲ್ಲಿ ಮುನೀಬಾ ಅಲಿ ಮತ್ತು ಶಾವಲ್ ಜುಲ್ಫಿಕರ್ ಅವರ ಮೂಲಕ 27 ರನ್‌ಗಳ ಉತ್ತಮ ಆರಂಭ ಪಡೆದಿತ್ತು. ಆದರೆ ಬಳಿಕ ಭಾರತೀಯ ಬೌಲರ್‌ಗಳು ಪಾಕ್ ಬ್ಯಾಟಿಂಗ್ ಬೆನ್ನೆಲುಬು ಮುರಿದರು. ಎಡಗೈ ಸ್ಪಿನ್ನರ್ ಶ್ರೀ ಚರಣಿ 7 ರನ್ ನೀಡಿ 3 ವಿಕೆಟ್ ಕಬಳಿಸಿದರೆ, ಪ್ರೇಮಾ ರಾವತ್ ಕೂಡ 3 ವಿಕೆಟ್ ಪಡೆದು ಮಿಂಚಿದರು. ದೀಪ್ತಿ ಶರ್ಮಾ 2 ವಿಕೆಟ್ ಪಡೆದು ಪಾಕ್ ಕುಸಿತವನ್ನು ಮತ್ತಷ್ಟು ವೇಗಗೊಳಿಸಿದರು.

18.1 ಓವರ್‌ಗಳಲ್ಲಿ ಪಾಕಿಸ್ತಾನದ ಇನಿಂಗ್ಸ್ 55 ರನ್‌ಗಳಿಗೆ ಅಂತ್ಯಗೊಂಡಿತು. ಇದು ಮಹಿಳಾ ಟಿ20 ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಪಾಕಿಸ್ತಾನದ ಅತ್ಯಂತ ಕಡಿಮೆ ಮೊತ್ತವಾಗಿದ್ದು, ಹಿಂದಿನ 56 ರನ್‌ಗಳ ದಾಖಲೆಯನ್ನು ಮೀರಿಸಿದೆ.

55 ರನ್‌ಗಳ ಸುಲಭ ಗುರಿ ಬೆನ್ನಟ್ಟಿದ ಭಾರತ 8.4 ಓವರ್‌ಗಳಲ್ಲಿ 3 ವಿಕೆಟ್ ಕಳೆದುಕೊಂಡು 57 ರನ್ ಗಳಿಸಿ ಜಯ ಸಾಧಿಸಿತು. ಈ ಮೂಲಕ ಭಾರತ ಟೂರ್ನಿಯಲ್ಲಿ ತನ್ನ ಪ್ರಾಬಲ್ಯ ಮುಂದುವರಿಸಿತು. ಭಾರತದ ಸ್ಪಿನ್ ಬೌಲರ್‌ಗಳ ಸಂಘಟಿತ ದಾಳಿಗೆ ಪಾಕಿಸ್ತಾನದ ಬ್ಯಾಟರ್‌ಗಳು ಉತ್ತರ ನೀಡಲು ವಿಫಲರಾದರು.

### ಮದ್ರಾಸ್ ರೆಜಿಮೆಂಟ್‌ನಿಂದ ಶಸ್ತ್ರಾಸ್ತ್ರ ಕಳವು: ಎನ್‌ಐಎ ತನಿಖೆ

● ವಿಕ್ರಮ ವಾಹಿನಿ । ಹೈದರಾಬಾದ್

ತೆಲಂಗಾಣದ ಸಿಕಂದರಾಬಾದ್ ಸಮೀಪದ ಬೊಲ್ಲಾರಂನಲ್ಲಿರುವ ಮದ್ರಾಸ್ ರೆಜಿಮೆಂಟ್‌ನಿಂದ ಶಸ್ತ್ರಾಸ್ತ್ರಗಳು ಕಳುವಾಗಿ ನಾಲ್ಕು ದಿನ ಕಳೆದರೂ ಯಾವುದೇ ಸ್ಪಷ್ಟ ಸುಳಿವು ಸಿಗದ ಹಿನ್ನೆಲೆಯಲ್ಲಿ ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ತನಿಖೆಗೆ ಮುಂದಾಗಿದೆ. ಬೊಲ್ಲಾರಂ ಪೊಲೀಸರು, ಸೇನಾ ಅಧಿಕಾರಿಗಳು ಹಾಗೂ ಗುಪ್ತಚರ ಸಂಸ್ಥೆಗಳೂ ಪ್ರತ್ಯೇಕವಾಗಿ ತನಿಖೆ ನಡೆಸುತ್ತಿವೆ.

ರೆಜಿಮೆಂಟ್‌ನ ರಹಸ್ಯ ಶಸ್ತ್ರಾಸ್ತ್ರ ಸಂಗ್ರಹ ಕೊಠಡಿಯ ಸಿಸಿಟಿವಿ ಕ್ಯಾಮೆರಾಗಳು ಕಳವು ನಡೆದ ಅವಧಿಯಲ್ಲಿ ಕಾರ್ಯನಿರ್ವಹಿಸದಿರುವುದು ಪ್ರಕರಣವನ್ನು ಮತ್ತಷ್ಟು ಗಂಭೀರಗೊಳಿಸಿದೆ. ತನಿಖೆಯಲ್ಲಿ, ಕಳೆದ ಸುಮಾರು 10 ದಿನಗಳಿಂದ ಕ್ಯಾಮೆರಾಗಳನ್ನು ರಾತ್ರಿ 10.30ರ ಬಳಿಕ ಸ್ಥಗಿತಗೊಳಿಸಿ, ಬೆಳಗ್ಗೆ 7ರ ನಂತರ ಮತ್ತೆ ಚಾಲನೆಗೊಳಿಸಲಾಗುತ್ತಿತ್ತು ಎಂಬುದು ಬೆಳಕಿಗೆ ಬಂದಿದೆ. ಇದಕ್ಕೆ ಹಿರಿಯ ಅಧಿಕಾರಿಗಳಿಂದ ಯಾವುದೇ ಸೂಚನೆ ಇರಲಿಲ್ಲ ಎನ್ನಲಾಗಿದೆ.

ಶಸ್ತ್ರಾಸ್ತ್ರಗಳ ಸಂಗ್ರಹ ಹಾಗೂ ಮದ್ದು ಗುಂಡುಗಳ ದಾಖಲೆ ನಿರ್ವಹಣೆಯಲ್ಲಿಯೂ ಲೋಪಗಳು ಪತ್ತೆಯಾಗಿವೆ. ಕಳವುಗೂ ಮುನ್ನ ದಾಖಲೆಗಳು ಸಮರ್ಪಕವಾಗಿದ್ದರೂ ಬಳಿಕ ಅವುಗಳಲ್ಲಿ ವ್ಯತ್ಯಾಸ ಕಂಡುಬಂದಿರುವುದು ಅಧಿಕಾರಿಗಳ ಅನುಮಾನಕ್ಕೆ ಕಾರಣವಾಗಿದೆ. ಶಸ್ತ್ರಾಸ್ತ್ರಗಳನ್ನು ಒಂದೇ ಬಾರಿ ಕಳವು ಮಾಡದೆ ಹಂತ ಹಂತವಾಗಿ ಹೊರಕ್ಕೆ ಸಾಗಿಸಿರುವ ಸಾಧ್ಯತೆಯನ್ನೂ ತನಿಖಾಧಿಕಾರಿಗಳು ಪರಿಶೀಲಿಸುತ್ತಿದ್ದಾರೆ.

ಅತ್ಯಂತ ಭದ್ರತೆಯಲ್ಲಿರುವ ಶಸ್ತ್ರಾಸ್ತ್ರ ಕೊಠಡಿಗೆ ಹೊರಗಿನವರು ಸುಲಭವಾಗಿ ಪ್ರವೇಶಿಸುವ ಸಾಧ್ಯತೆ ಕಡಿಮೆ ಇರುವ ಹಿನ್ನೆಲೆಯಲ್ಲಿ ರೆಜಿಮೆಂಟ್‌ನೊಳಗಿನವರ ಕೈವಾಡವಿದೆಯೇ ಎಂಬ ಬಗ್ಗೆಯೂ ತನಿಖೆ ನಡೆಯುತ್ತಿದೆ. ಘಟನೆಯ ರಾತ್ರಿ ಕರ್ತವ್ಯದಲ್ಲಿದ್ದ ಸಿಬ್ಬಂದಿ ಹಾಗೂ ಈ ಹಿಂದೆ ರೆಜಿಮೆಂಟ್‌ನಲ್ಲಿ ಕೆಲಸ ಮಾಡಿ ವರ್ಗಾವಣೆಯಾಗಿರುವವರನ್ನೂ ವಿಚಾರಣೆಗೊಳಪಡಿಸಲಾಗಿದೆ.

ಕಳುವಾದ ಶಸ್ತ್ರಾಸ್ತ್ರಗಳು ದುಷ್ಕರ್ಮಿಗಳ ಅಥವಾ ಭಯೋತ್ಪಾದಕ ಸಂಘಟನೆಗಳ ಕೈ ಸೇರುವ ಸಾಧ್ಯತೆಯ ಹಿನ್ನೆಲೆಯಲ್ಲಿ ಭಯೋತ್ಪಾದಕ ಕೃತ್ಯದ ಕೋನದಲ್ಲಿಯೂ ತನಿಖೆ ನಡೆಯುತ್ತಿದೆ. ಕಳುವಾದ ಶಸ್ತ್ರಾಸ್ತ್ರಗಳ ಪತ್ತೆ ಮತ್ತು ಅವು ಹೊರಗೆ ಸಾಗಿರುವ ಸಾಧ್ಯತೆಯ ಮಾರ್ಗಗಳ ಬಗ್ಗೆ ತನಿಖಾ ಸಂಸ್ಥೆಗಳು ಮಾಹಿತಿ ಕಲೆಹಾಕುತ್ತಿವೆ.

ಸಿಸಿಟಿವಿ ಸ್ಥಗಿತ, ದಾಖಲೆಗಳಲ್ಲಿನ ವ್ಯತ್ಯಾಸ, ಒಳಗಿನವರ ಸಂಭವನೀಯ ಕೈವಾಡ ಹಾಗೂ ಶಸ್ತ್ರಾಸ್ತ್ರಗಳ ಸಾಗಣೆ ಸೇರಿದಂತೆ ಎಲ್ಲಾ ಆಯಾಮಗಳಲ್ಲೂ ತನಿಖೆ ಮುಂದುವರಿದಿದ್ದು, ಕಳುವಾದ ಶಸ್ತ್ರಾಸ್ತ್ರಗಳನ್ನು ಶೀಘ್ರ ಪತ್ತೆಹಚ್ಚುವುದು ತನಿಖಾ ಸಂಸ್ಥೆಗಳಿಗೆ ಪ್ರಮುಖ ಸವಾಲಾಗಿದೆ.

# ದೇವರ ಹುಂಡಿಗೆ ಕನ್ನ ಹಾಕಿದ್ರೆ ಶಿಕ್ಷೆ

● ವಿಕ್ರಮ ವಾಹಿನಿ । ಬೆಂಗಳೂರು

ದೇವಾಲಯಕ್ಕೆ ಬರುವ ಭಕ್ತರ ಕಾಣಿಕೆ ಹಾಗೂ ಹಣವನ್ನು ದುರುಪಯೋಗಪಡಿಸಿಕೊಳ್ಳುವುದು ದೇವರಿಗೆ ಎಸಗುವ ವಂಚನೆಯಾಗಿದೆ ಎಂದು ಹೈಕೋರ್ಟ್ ಮಹತ್ವದ ಅಭಿಪ್ರಾಯ ವ್ಯಕ್ತಪಡಿಸಿದೆ. ಉಡುಪಿ ಜಿಲ್ಲೆಯ ಬ್ರಹ್ಮಾವರ ತಾಲೂಕಿನ ದುರ್ಗಾಪರಮೇಶ್ವರಿ ದೇವಾಲಯದಲ್ಲಿ ನಕಲಿ ರಸೀದಿ ನೀಡಿ ಹಣ ದುರುಪಯೋಗಪಡಿಸಿಕೊಂಡ ಆರೋಪದ ಹಿನ್ನೆಲೆಯಲ್ಲಿ ದ್ವಿತೀಯ ದರ್ಜೆ ಸಹಾಯಕ ರಾಜೇಶ್ ನಾಯಕ್ ಅವರನ್ನು ಸೇವೆಯಿಂದ ವಜಾಗೊಳಿಸಿರುವ ಕ್ರಮವನ್ನು ನ್ಯಾಯಾಲಯ ಎತ್ತಿಹಿಡಿದಿದೆ.

ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರ ಏಕಸದಸ್ಯ ಪೀಠ ಅರ್ಜಿ ವಿಚಾರಣೆ ನಡೆಸಿ, ನಂಬಿಕೆಯ ಹುದ್ದೆಯಲ್ಲಿದ್ದು ಭಕ್ತರಿಂದ ಸಂಗ್ರಹಿಸಿದ ಹಣದಲ್ಲಿ ಅಕ್ರಮ ಎಸಗಿರುವುದು ಗಂಭೀರ ತಪ್ಪು. ಇಂತಹ ಪ್ರಕರಣಗಳಲ್ಲಿ ಸೇವೆಯಿಂದ ವಜಾಗೊಳಿಸುವುದು ಸೂಕ್ತ ಶಿಕ್ಷೆಯಾಗಿದೆ ಎಂದು ತಿಳಿಸಿ, ರಾಜೇಶ್ ನಾಯಕ್ ಸಲ್ಲಿಸಿದ್ದ ಅರ್ಜಿಯನ್ನು ವಜಾಗೊಳಿಸಿತು.

**ದೇವಾಲಯಗಳ ಹಣಕಾಸು ವ್ಯವಸ್ಥೆಗೆ ಡಿಜಿಟಲ್ ನಿಯಂತ್ರಣ**

ದೇವಾಲಯಗಳ ಆದಾಯ ಸೋರಿಕೆ ಹಾಗೂ ಅಕ್ರಮ ತಡೆಯುವ ಉದ್ದೇಶದಿಂದ ರಾಜ್ಯದ ಎಲ್ಲ ಮುಜರಾಯಿ ದೇವಾಲಯಗಳಲ್ಲಿ ಡಿಜಿಟಲ್ ಲೆಕ್ಕಪತ್ರ ವ್ಯವಸ್ಥೆ ಜಾರಿಗೊಳಿಸುವಂತೆ ಹೈಕೋರ್ಟ್ ಸರ್ಕಾರಕ್ಕೆ ಸೂಚಿಸಿದೆ. ಆದಾಯ ಸಂಗ್ರಹ ಮತ್ತು ವೆಚ್ಚದ ವಿವರಗಳನ್ನು ನೈಜ ಸಮಯದಲ್ಲಿ ದಾಖಲಿಸಿ ಪರಿಶೀಲಿಸಲು ಕೇಂದ್ರೀಕೃತ ತಂತ್ರಾಂಶ ರೂಪಿಸುವಂತೆ ಇ-ಆಡಳಿತ ಹಾಗೂ ಧಾರ್ಮಿಕ ದತ್ತಿ ಇಲಾಖೆಗೆ ನಿರ್ದೇಶನ ನೀಡಿದೆ.

### ಪ್ರಮುಖ ಮಾರ್ಗಸೂಚಿಗಳು

- **ಡಿಜಿಟಲ್ ಲೆಕ್ಕ:** ಪೂಜೆ, ಸೇವಾ ಟಿಕೆಟ್, ಕಾಣಿಕೆ, ಹುಂಡಿ, ವಸತಿ ಸೇರಿದಂತೆ ಎಲ್ಲ ಆದಾಯ-ವೆಚ್ಚದ ವಿವರಗಳನ್ನು ನೈಜ ಸಮಯದಲ್ಲಿ ದಾಖಲಿಸಬೇಕು.
- **ಕ್ಯೂಆರ್ ರಸೀದಿ:** ಪ್ರತಿಯೊಂದು ರಸೀದಿಗೂ ವಿಶಿಷ್ಟ ಸರಣಿ ಸಂಖ್ಯೆ ಮತ್ತು ಕ್ಯೂಆರ್ ಕೋಡ್ ಕಡ್ಡಾಯ.
- **ನಕಲಿ ರಸೀದಿಗೆ ಕಡಿವಾಣ:** ಒಂದೇ ಸರಣಿ ಸಂಖ್ಯೆಯ ರಸೀದಿಯನ್ನು ಮರುಮುದ್ರಿಸಲು ಅವಕಾಶ ಇರಬಾರದು.
- **ನಗದು ಬಳಕೆ ಕಡಿಮೆ:** ಯುಪಿಐ, ಕ್ಯೂಆರ್ ಕೋಡ್, ಡೆಬಿಟ್-ಕ್ರೆಡಿಟ್ ಕಾರ್ಡ್ ಮತ್ತು ನೆಟ್ ಬ್ಯಾಂಕಿಂಗ್ ಪಾವತಿಗೆ ಆದ್ಯತೆ ನೀಡಬೇಕು.
- **ಹುಂಡಿ ಎಣಿಕೆಗೆ ನಿಗಾ:** ಎಣಿಕೆ ಕೊಠಡಿಗಳಲ್ಲಿ ಸಿಸಿಟಿವಿ ಅಳವಡಿಸುವುದು ಹಾಗೂ ಸಿಬ್ಬಂದಿಗೆ ಬಾಡಿ ಕ್ಯಾಮರಾ ಕಡ್ಡಾಯ.
- **ಆಭರಣಗಳ ದಾಖಲೆ:** ದೇವಾಲಯದ ಚಿನ್ನ, ಬೆಳ್ಳಿ ಹಾಗೂ ಅಮೂಲ್ಯ ವಸ್ತುಗಳ ವಿವರ, ತೂಕ ಮತ್ತು ಛಾಯಾಚಿತ್ರ ಒಳಗೊಂಡ ಡಿಜಿಟಲ್ ದಾಸ್ತಾನು ಇರಬೇಕು.



**ಏನಿದು ಪ್ರಕರಣ?**

2018ರ ಆಗಸ್ಟ್‌ನಲ್ಲಿ ರಾಜೇಶ್ ನಾಯಕ್ ಅವರು ದೇವಾಲಯದ ಐಟಿ ಅಡ್ಮಿನ್ ಬಳಕೆದಾರರ ಹೆಸರು ಮತ್ತು ಗುಪ್ತಪದವನ್ನು ದುರ್ಬಳಕೆ ಮಾಡಿಕೊಂಡು ದೇವರ ಸರ್ವಾಲಂಕಾರ ಪೂಜೆ ಹಾಗೂ ಹೂವಿನ ಪೂಜೆಗೆ ಬಂದ ಭಕ್ತರಿಗೆ ನಕಲಿ ರಸೀದಿಗಳನ್ನು ನೀಡಿದ್ದರು ಎಂಬ ಆರೋಪ ಎದುರಾಗಿತ್ತು. ಈ ಮೂಲಕ ಸಂಗ್ರಹಿಸಿದ ಹಣವನ್ನು ದೇವಾಲಯದ ಖಾತೆಗೆ ಜಮಾ ಮಾಡದೆ ದುರುಪಯೋಗಪಡಿಸಿಕೊಂಡಿರುವುದು ತನಿಖೆಯಲ್ಲಿ ಬೆಳಕಿಗೆ ಬಂದಿತ್ತು.

ಈ ಕುರಿತು ಉಪವಿಭಾಗಾಧಿಕಾರಿಗಳು ವರದಿ ಸಲ್ಲಿಸಿದ ಬಳಿಕ ದೇವಾಲಯದ ಕಾರ್ಯನಿರ್ವಾಹಕ ಅಧಿಕಾರಿ ರಾಜೇಶ್ ನಾಯಕ್ ಅವರನ್ನು ಸೇವೆಯಿಂದ ವಜಾಗೊಳಿಸಿದ್ದರು. ಧಾರ್ಮಿಕ ದತ್ತಿ ಇಲಾಖೆಯ ಆಯುಕ್ತರೂ ವಜಾ ಆದೇಶವನ್ನು ಎತ್ತಿಹಿಡಿದಿದ್ದರು. ಇದನ್ನು ಪ್ರಶ್ನಿಸಿ ಅವರು ಹೈಕೋರ್ಟ್ ಮೆಟ್ಟಿಲೇರಿದ್ದರು. ಇದೀಗ ನ್ಯಾಯಾಲಯವೂ ವಜಾ ಕ್ರಮವನ್ನು ಸಮರ್ಥಿಸಿದೆ.

# “ಸರ್ಕಾರಿ ಶಾಲಾ ಮಕ್ಕಳಿಗೆ ಶೇ.7.5 ಮೀಸಲಾತಿ”

**ಗ್ರಾಮೀಣ ಹಾಗೂ ಬಡ ಕುಟುಂಬಗಳ ಮಕ್ಕಳಿಗೆ ಉನ್ನತ ಶಿಕ್ಷಣ ಮತ್ತು ಉದ್ಯೋಗಾವಕಾಶ ಹೆಚ್ಚಿಸುವ ಉದ್ದೇಶದಿಂದ ಸರ್ಕಾರಿ ಶಾಲಾ ವಿದ್ಯಾರ್ಥಿಗಳಿಗೆ ಶೇ.7.5ರಷ್ಟು ಮೀಸಲಾತಿ ಕಲ್ಪಿಸುವುದಾಗಿ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಘೋಷಿಸಿದ್ದಾರೆ. ಮೀಸಲಾತಿ ಜಾರಿಗೆ ಸಂಬಂಧಿಸಿದ ನಿಯಮಾವಳಿಗಳನ್ನು ಶೀಘ್ರದಲ್ಲೇ ಪ್ರಕಟಿಸಲಾಗುವುದು.**

● ವಿಕ್ರಮ ವಾಹಿನಿ । ಕೂಡ್ಲಿಗಿ

ಗ್ರಾಮೀಣ ಹಾಗೂ ಬಡ ಕುಟುಂಬಗಳ ಸರ್ಕಾರಿ ಶಾಲಾ ಮಕ್ಕಳಿಗೆ ಉನ್ನತ ಶಿಕ್ಷಣ ಮತ್ತು ಉದ್ಯೋಗದಲ್ಲಿ ಹೆಚ್ಚಿನ ಅವಕಾಶ ಕಲ್ಪಿಸುವ ಉದ್ದೇಶದಿಂದ ಶೇ.7.5ರಷ್ಟು ಮೀಸಲಾತಿ ನೀಡಲು ಸರ್ಕಾರ ಮುಂದಾಗಿದೆ ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಘೋಷಿಸಿದರು.

ಕೂಡ್ಲಿಗಿಯಲ್ಲಿ ನಡೆದ ಪ್ರಜಾಸೇವಾ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಹಳ್ಳಿಗಳ ಸರ್ಕಾರಿ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ಮಕ್ಕಳಿಗೆ ಈ ಮೀಸಲಾತಿ ಕಲ್ಪಿಸಲಾಗುವುದು. ಇದರಿಂದ ಗ್ರಾಮೀಣ ಪ್ರದೇಶದ ಬಡ ಹಾಗೂ ಮಧ್ಯಮ ವರ್ಗದ ಮಕ್ಕಳಿಗೆ ಉನ್ನತ ಶಿಕ್ಷಣ ಮತ್ತು ಉದ್ಯೋಗಾವಕಾಶಗಳಲ್ಲಿ ಅನುಕೂಲವಾಗಲಿದೆ ಎಂದರು.

ಮೀಸಲಾತಿ ಜಾರಿಯ ಕುರಿತು ಸಂಪೂರ್ಣ ನಿಯಮಾವಳಿ ಹಾಗೂ ಮಾರ್ಗಸೂಚಿಗಳನ್ನು ಮುಂದಿನ ದಿನಗಳಲ್ಲಿ ಅಧಿಕೃತವಾಗಿ ಪ್ರಕಟಿಸಲಾಗುವುದು ಎಂದು ಶಿವಕುಮಾರ್ ತಿಳಿಸಿದರು.



ಈಗಾಗಲೇ ಗ್ರಾಮೀಣ ಪ್ರದೇಶದಲ್ಲಿ 1ರಿಂದ 10ನೇ ತರಗತಿವರೆಗೆ ವ್ಯಾಸಂಗ ಮಾಡಿದವರಿಗೆ ಕರ್ನಾಟಕ ರಾಜ್ಯ ನಾಗರಿಕ ಸೇವೆಗಳ ನೇರ ನೇಮಕಾತಿಯ ಗ್ರೂಪ್ ಹುದ್ದೆಗಳಲ್ಲಿ ಶೇ.25ರಷ್ಟು ಹಾಗೂ ವೃತ್ತಿಪರ ಕೋರ್ಸ್‌ಗಳ ಪ್ರವೇಶದಲ್ಲಿ ಶೇ.15ರಷ್ಟು ಮೀಸಲಾತಿ ಜಾರಿಯಲ್ಲಿದೆ.

## ಶಿಕ್ಷಕರ ಹೆಸರಿನ ಮುಂದೆ ‘Tr’ ಬಳಕೆಗೆ ಸರ್ಕಾರದ ಅನುಮತಿ

● ವಿಕ್ರಮ ವಾಹಿನಿ । ಬೆಂಗಳೂರು

ರಾಜ್ಯದ ಶಿಕ್ಷಕರಿಗೆ ಗೌರವ ಸೂಚಿಸುವ ನಿಟ್ಟಿನಲ್ಲಿ ಇನ್ನು ಮುಂದೆ ತಮ್ಮ ಹೆಸರಿನ ಮುಂದೆ ‘Tr’ (Teacher) ಎಂಬ ಪೂರ್ವಪ್ರತ್ಯಯ ಬಳಸಲು ಸರ್ಕಾರ ಅನುಮತಿ ನೀಡಿ ಆದೇಶ ಹೊರಡಿಸಿದೆ.

ಶಿಕ್ಷಕರ ದಿನಾಚರಣೆಯ ಅಂಗವಾಗಿ ಈ ಮಹತ್ವದ ನಿರ್ಧಾರ ಕೈಗೊಳ್ಳಲಾಗಿದ್ದು, ಸಮಾಜ ನಿರ್ಮಾಣ, ವಿದ್ಯಾರ್ಥಿಗಳ ಶೈಕ್ಷಣಿಕ ಹಾಗೂ ವ್ಯಕ್ತಿತ್ವ ವಿಕಸನದಲ್ಲಿ ಶಿಕ್ಷಕರ ಕೊಡುಗೆಯನ್ನು ಗುರುತಿಸಿ ಈ ಗೌರವ ನೀಡಲಾಗಿದೆ ಎಂದು ಸರ್ಕಾರ ತಿಳಿಸಿದೆ.

ಶಿಕ್ಷಕರು ಕೇವಲ ಅಕ್ಷರಜ್ಞಾನ ನೀಡುವುದಷ್ಟೇ ಅಲ್ಲದೆ, ವಿದ್ಯಾರ್ಥಿಗಳಲ್ಲಿ ಶಿಸ್ತು, ಪ್ರಾಮಾಣಿಕತೆ, ವೈಜ್ಞಾನಿಕ ಮನೋಭಾವ, ಆತ್ಮವಿಶ್ವಾಸ ಹಾಗೂ ಸಾಂವಿಧಾನಿಕ ಮೌಲ್ಯಗಳನ್ನು ಬೆಳೆಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತಾರೆ. ಮಕ್ಕಳ ಪ್ರತಿಭೆಯನ್ನು ಗುರುತಿಸಿ, ಅವರ ಭವಿಷ್ಯದ ಶಿಕ್ಷಣ ಹಾಗೂ ವೃತ್ತಿ ಆಯ್ಕೆಗೆ ಮಾರ್ಗದರ್ಶನ ನೀಡುತ್ತಾರೆ ಎಂದು ಆದೇಶದಲ್ಲಿ ವಿವರಿಸಲಾಗಿದೆ.

ವೈದ್ಯರು, ಎಂಜಿನಿಯರ್‌ಗಳು, ವಿಜ್ಞಾನಿಗಳು, ಅಧಿಕಾರಿಗಳು, ಉದ್ಯಮಿಗಳು ಸೇರಿದಂತೆ ವಿವಿಧ ಕ್ಷೇತ್ರಗಳ ತಜ್ಞರನ್ನು ರೂಪಿಸುವಲ್ಲಿ ಶಿಕ್ಷಕರ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ಜಾತಿ, ಧರ್ಮದ ಭೇದವಿಲ್ಲದೆ ಸಮಾನ ಶಿಕ್ಷಣ ನೀಡುವ ಮೂಲಕ ಸಾಮಾಜಿಕ ಸಾಮರಸ್ಯ ಬೆಳೆಸುವಲ್ಲಿಯೂ ಶಿಕ್ಷಕರು ಪ್ರಮುಖ ಪಾತ್ರ ವಹಿಸುತ್ತಾರೆ ಎಂದು ಸರ್ಕಾರ ಹೇಳಿದೆ.

## ಇರಾನ್‌ನ 3 ತೈಲ ಟ್ಯಾಂಕರ್‌ಗಳ ಮೇಲೆ ಅಮೆರಿಕ ದಾಳಿ

● ವಿಕ್ರಮ ವಾಹಿನಿ । ಟೆಹ್ರಾನ್

ಅಮೆರಿಕದ ನೌಕಾಪಡೆಯ ಯುದ್ಧನೌಕೆಗಳ ಮೇಲೆ ಇರಾನ್ ಕ್ಷಿಪಣಿ ದಾಳಿ ನಡೆಸಲು ಯತ್ನಿಸಿದ ಬೆನ್ನಲ್ಲೇ, ಅಮೆರಿಕದ ಪಡೆಗಳು ಇರಾನ್‌ನ ಮೂರು ತೈಲ ಟ್ಯಾಂಕರ್‌ಗಳ ಮೇಲೆ ದಾಳಿ ನಡೆಸಿವೆ ಎಂದು ಅಮೆರಿಕದ ಸೆಂಟ್ರಲ್ ಕಮಾಂಡ್ ತಿಳಿಸಿದೆ. ಖಾರ್ಗ್ ದ್ವೀಪದ ಕರಾವಳಿ ಹಾಗೂ ಜಾಸ್ಕ್ ಸಮೀಪ ಎರಡು ಕಚ್ಚಾ ತೈಲ ಟ್ಯಾಂಕರ್‌ಗಳನ್ನು ಅಮೆರಿಕದ ಪಡೆಗಳು ನಾಶಪಡಿಸಿದ್ದು, ಓಮನ್ ಕೊಲ್ಲಿಯಲ್ಲಿ ಮತ್ತೊಂದು ಟ್ಯಾಂಕರ್‌ನ್ನು ನಿಷ್ಕ್ರಿಯಗೊಳಿಸಲಾಗಿದೆ. ದಾಳಿಯಲ್ಲಿ ಯಾವುದೇ ಅಮೆರಿಕನ್ ಸಿಬ್ಬಂದಿಗೆ ಹಾನಿಯಾಗಿಲ್ಲ ಎಂದು ತಿಳಿಸಲಾಗಿದೆ.

ಈ ಟ್ಯಾಂಕರ್‌ಗಳು ಇರಾನ್‌ನ ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ ಕಾರ್ಪ್ಸ್ (ಐಆರ್‌ಜಿಸಿ) ಮತ್ತು ಅದರ ಬೆಂಬಲಿತ ಗುಂಪುಗಳಿಗೆ ಹಣಕಾಸು ಒದಗಿಸುತ್ತಿದ್ದ ಬಹುಕೋಟಿ ಡಾಲರ್‌ಗಳ ‘ನೆರಳು ಜಾಲ’ದ ಭಾಗವಾಗಿದ್ದವು ಎಂದು ಅಮೆರಿಕ ಆರೋಪಿಸಿದೆ. ಈ ಬೆಳವಣಿಗೆಯಿಂದ ಹಾರ್ಮುಜ್ ಜಲಸಂಧಿ ಪ್ರದೇಶದಲ್ಲಿ ಅಮೆರಿಕ-ಇರಾನ್ ನಡುವಿನ ಉದ್ವಿಗ್ನತೆ ಮತ್ತಷ್ಟು ತೀವ್ರಗೊಂಡಿದೆ.


## 7.8% ಜಿಡಿಪಿ ಬೆಳವಣಿಗೆ; ಟೀಕಾಕಾರರಿಗೆ ಮೋದಿ ತಿರುಗೇಟು

● ವಿಕ್ರಮ ವಾಹಿನಿ । ನವದೆಹಲಿ

ಪಶ್ಚಿಮ ಏಷ್ಯಾದಲ್ಲಿ ಯುದ್ಧ ಹಾಗೂ ಜಾಗತಿಕ ವ್ಯಾಪಾರಕ್ಕೆ ಎದುರಾಗಿರುವ ಹಲವು ಸವಾಲುಗಳ ನಡುವೆಯೂ ಭಾರತ ಶೇ.7.8ರ ತ್ರೈಮಾಸಿಕ ಜಿಡಿಪಿ ಬೆಳವಣಿಗೆ ದಾಖಲಿಸಿರುವುದು ದೇಶದ ಆರ್ಥಿಕ ಶಕ್ತಿ ಮತ್ತು ಸಾಮರ್ಥ್ಯಕ್ಕೆ ಸಾಕ್ಷಿಯಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು.

ಶ್ರೀ ರಾಮ್ ಕಾಲೇಜ್ ಆಫ್ ಕಾಮರ್ಸ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಭಾರತ ‘ಫ್ರಾಜೈಲ್ ಫೈವ್’ ಆರ್ಥಿಕತೆ ಎಂಬ ಟೀಕೆಗಳಿಂದ ಹೊರಬಂದು ನೀತಿ ಪಾರ್ಶ್ವವಾಯುವಿನಿಂದ ನೀತಿ ಚೈತನ್ಯದತ್ತ ಸಾಗುತ್ತಿದೆ. ಇತ್ತೀಚಿನ ಜಿಡಿಪಿ ಅಂಕಿಅಂಶಗಳು ದೇಶದ ಆತ್ಮವಿಶ್ವಾಸವನ್ನು ಮತ್ತಷ್ಟು ಹೆಚ್ಚಿಸಿವೆ. ಭಾರತವನ್ನು ಹಿಂದೆ ಟೀಕಿಸುತ್ತಿದ್ದವರಿಗೆ ಈ ಬೆಳವಣಿಗೆಯನ್ನು ಜೀರ್ಣಿಸಿಕೊಳ್ಳಲು ಕಷ್ಟವಾಗುತ್ತಿದೆ ಎಂದು ವ್ಯಂಗ್ಯವಾಡಿದರು.

ಜಾಗತಿಕ ಮಟ್ಟದಲ್ಲಿ ಅನಿಶ್ಚಿತತೆ, ಯುದ್ಧ ಮತ್ತು ವ್ಯಾಪಾರ ಸಂಬಂಧಿತ ಸವಾಲುಗಳ ನಡುವೆಯೂ ಶೇ.7.8ರ ಬೆಳವಣಿಗೆ ಸಾಧಿಸಿರುವುದು ಭಾರತದ ಆರ್ಥಿಕ ಸ್ಥಿರತೆ ಹಾಗೂ ಸಾಮರ್ಥ್ಯವನ್ನು ತೋರಿಸುತ್ತದೆ. ದೇಶ ಬೆಳೆಯುವುದರ ಜತೆಗೆ ಉದ್ಯೋಗಾವಕಾಶಗಳನ್ನೂ ಸೃಷ್ಟಿಸುತ್ತಿದೆ ಎಂದು ಹೇಳಿದರು.



“ಜಾಗತಿಕ ಸವಾಲುಗಳ ನಡುವೆಯೂ ಶೇ.7.8ರ ಜಿಡಿಪಿ ಬೆಳವಣಿಗೆ ಭಾರತದ ಆರ್ಥಿಕ ಶಕ್ತಿ ತೋರಿಸಿದೆ. ಇದನ್ನು ಟೀಕಾಕಾರರಿಗೆ ಜೀರ್ಣಿಸಿಕೊಳ್ಳಲು ಕಷ್ಟವಾಗುತ್ತಿದೆ.”
–ಪ್ರಧಾನಿ ನರೇಂದ್ರ ಮೋದಿ

2013ರ ಅವಧಿಯ ಪರಿಸ್ಥಿತಿಯನ್ನು ಉಲ್ಲೇಖಿಸಿದ ಮೋದಿ, ಆಗ ದೇಶದಲ್ಲಿ ಭಯೋತ್ಪಾದಕ ದಾಳಿಗಳು, ನಿಧಾನಗತಿಯ ಆರ್ಥಿಕ ಬೆಳವಣಿಗೆ, ಹೆಚ್ಚಿನ ಹಣದುಬ್ಬರ ಹಾಗೂ ಕೈಗಾರಿಕಾ ವಲಯದ ಮಂದಗತಿ ಸೇರಿದಂತೆ ಹಲವು ಸವಾಲುಗಳಿದ್ದವು ಎಂದರು. ಆ ಸಂದರ್ಭದಲ್ಲಿ ಹಣದುಬ್ಬರ ಸುಮಾರು ಶೇ.10ರಷ್ಟಿತ್ತು ಹಾಗೂ ಚಾಲ್ತಿ ಖಾತೆ ಕೊರತೆಯೂ ಗಂಭೀರವಾಗಿತ್ತು ಎಂದು ವಿವರಿಸಿದರು.

ವಿದ್ಯಾರ್ಥಿಗಳು ದೇಶದ ಬೆಳವಣಿಗೆಯಲ್ಲಿ ತಮ್ಮದೇ ಆದ ಪ್ರಭಾವ ಮೂಡಿಸಬೇಕು. ಸವಾಲುಗಳನ್ನು ಅವಕಾಶಗಳಾಗಿ ಪರಿವರ್ತಿಸಿ ಹೊಸ ಆಲೋಚನೆಗಳೊಂದಿಗೆ ಮುನ್ನಡೆಯುವಂತೆ ಪ್ರಧಾನಿ ಕರೆ ನೀಡಿದರು.

# ಎನ್‌ಪಿಎಸ್ ರದ್ದು-ಒಪಿಎಸ್ ಮರುಜಾರಿ: ಪರಮೇಶ್ವರ್

● ವಿಕ್ರಮ ವಾಹಿನಿ । ಬೆಂಗಳೂರು

**ಸರ್ಕಾರಿ ನೌಕರರ ಬಹುದಿನಗಳ ಬೇಡಿಕೆಯಾದ ಹಳೆಯ ಪಿಂಚಣಿ ಯೋಜನೆ (ಒಪಿಎಸ್) ಮರುಜಾರಿಗೆ ಸರ್ಕಾರ ಗಂಭೀರ ಚಿಂತನೆ ನಡೆಸಿದ್ದು, ಶೀಘ್ರದಲ್ಲೇ ಎನ್‌ಪಿಎಸ್ ರದ್ದುಪಡಿಸಿ ಒಪಿಎಸ್ ಜಾರಿಗೊಳಿಸುವ ಕುರಿತು ತೀರ್ಮಾನ ಕೈಗೊಳ್ಳಲಾಗುವುದು ಎಂದು ಉಪಮುಖ್ಯಮಂತ್ರಿ ಡಾ. ಜಿ. ಪರಮೇಶ್ವರ್ ತಿಳಿಸಿದ್ದಾರೆ. ಇದೇ ವೇಳೆ 13,500 ಶಿಕ್ಷಕರ ನೇಮಕಾತಿ ಪೂರ್ಣಗೊಂಡಿದ್ದು, ಶಿಕ್ಷಣ ಕ್ಷೇತ್ರದಲ್ಲಿ ಇನ್ನೂ 16,500 ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗಿದೆ.**

ಸರ್ಕಾರಿ ನೌಕರರ ಬಹುದಿನಗಳ ಬೇಡಿಕೆಯಾದ ಹಳೆಯ ಪಿಂಚಣಿ ಯೋಜನೆ (ಒಪಿಎಸ್) ಮರುಜಾರಿಗೆ ಸರ್ಕಾರ ಗಂಭೀರ ಚಿಂತನೆ ನಡೆಸಿದ್ದು, ಶೀಘ್ರದಲ್ಲೇ ಹೊಸ ಪಿಂಚಣಿ ಯೋಜನೆ (ಎನ್‌ಪಿಎಸ್) ರದ್ದುಪಡಿಸಿ ಒಪಿಎಸ್ ಜಾರಿಗೊಳಿಸುವ ಮಹತ್ವದ ತೀರ್ಮಾನ ಕೈಗೊಳ್ಳಲಿದೆ ಎಂದು ಉಪಮುಖ್ಯಮಂತ್ರಿ ಡಾ. ಜಿ. ಪರಮೇಶ್ವರ್ ಹೇಳಿದರು.

ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಹಾಗೂ ಉನ್ನತ ಶಿಕ್ಷಣ ಇಲಾಖೆ ಆಯೋಜಿಸಿದ್ದ ರಾಜ್ಯಮಟ್ಟದ ಶಿಕ್ಷಕರ ದಿನಾಚರಣೆ ಹಾಗೂ ರಾಜ್ಯ ಪ್ರಶಸ್ತಿ ಪುರಸ್ಕೃತ ಶಿಕ್ಷಕರಿಗೆ ಪ್ರಶಸ್ತಿ ಪ್ರದಾನ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು. ಚುನಾವಣೆಗೂ ಮುನ್ನ ಪಕ್ಷ ನೀಡಿದ್ದ ಭರವಸೆಯಂತೆ ಒಪಿಎಸ್ ಮರುಜಾರಿಗೆ ಮುಖ್ಯಮಂತ್ರಿಗಳು ಆಸಕ್ತಿ ಹೊಂದಿದ್ದು, ಈ ಕುರಿತು ಚರ್ಚೆ ನಡೆಸಲಾಗಿದೆ. ಸದ್ಯದಲ್ಲೇ ಅನುಷ್ಠಾನಕ್ಕೆ ಕ್ರಮ ಕೈಗೊಳ್ಳಲಾಗುವುದು ಎಂದರು.

ಶಿಕ್ಷಕರಿಗೆ ವೈದ್ಯರಿಗೆ ‘ಆಡಿ’ ಹಾಗೂ ಎಂಜಿನಿಯರ್‌ಗಳಿಗೆ ‘ಇಡಿ’ ಇರುವಂತೆ ಹೆಸರಿನ ಮುಂದೆ ‘ಖಿಡಿ’ ಎಂಬ ಗೌರವನಾಮ ಬಳಸಲು ಸರ್ಕಾರ ಅವಕಾಶ ಕಲ್ಪಿಸಿದೆ. ಮುಖ್ಯಮಂತ್ರಿ ನಿರ್ಧಾರದಂತೆ ಶಿಕ್ಷಣ ಸಚಿವರು ಈ ಕುರಿತು ಒಂದೇ ದಿನದಲ್ಲಿ ಆದೇಶ ಹೊರಡಿಸಿದ್ದಾರೆ ಎಂದು ಪರಮೇಶ್ವರ್ ತಿಳಿಸಿದರು.

ವಿದ್ಯಾರ್ಥಿಗಳ ಭವಿಷ್ಯ ರೂಪಿಸುವಲ್ಲಿ ಶಿಕ್ಷಕರ ಪಾತ್ರ ಮಹತ್ವದ್ದಾಗಿದ್ದು, ಕೇವಲ ಪಠ್ಯ ಬೋಧನೆಗೆ ಸೀಮಿತವಾಗದೆ ವಿದ್ಯಾರ್ಥಿಗಳ ಪ್ರತಿಭೆ ಗುರುತಿಸಿ, ಉತ್ತಮ ಮೌಲ್ಯಗಳು ಹಾಗೂ ಜೀವನ ಕೌಶಲ್ಯಗಳನ್ನು ಬೆಳೆಸುವುದು ಶಿಕ್ಷಕರ ಕರ್ತವ್ಯ. ಡಾ. ಸರ್ವಪಲ್ಲಿ ರಾಧಾಕೃಷ್ಣನ್ ಮತ್ತು ಸಾವಿತ್ರಿಬಾಯಿ ಫುಲೆ ಅವರ ಆದರ್ಶಗಳನ್ನು ಸಾಕಾರಗೊಳಿಸುವುದೇ ಅವರಿಗೆ ಸಲ್ಲಿಸುವ ನಿಜವಾದ ಗೌರವ ಎಂದರು.

**13,500 ಶಿಕ್ಷಕರ ನೇಮಕಾತಿ ಪೂರ್ಣ**

ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಮಾತನಾಡಿ, ಕಾನೂನು ತೊಡಕಿನಿಂದ ವಿಳಂಬವಾಗಿದ್ದ 13,500 ಶಿಕ್ಷಕರ ನೇಮಕಾತಿ ಪ್ರಕ್ರಿಯೆಯನ್ನು 11 ತಿಂಗಳಲ್ಲಿ ಪೂರ್ಣಗೊಳಿಸಿ ಆದೇಶ ನೀಡಲಾಗಿದೆ. ರಾಜ್ಯದಲ್ಲಿ ನಡೆಯುತ್ತಿರುವ ಒಟ್ಟು 72,000 ನೇಮಕಾತಿಗಳ ಪೈಕಿ ಶಿಕ್ಷಣ ಇಲಾಖೆಯಲ್ಲಿ 16,500 ಹುದ್ದೆಗಳನ್ನು ಭರ್ತಿ ಮಾಡಲಾಗುತ್ತಿದೆ ಎಂದರು.

ಎಡಿಬಿ ನೆರವಿನೊಂದಿಗೆ 2,500 ಕೋಟಿ ವೆಚ್ಚದಲ್ಲಿ 500 ಹೊಸ ಶಾಲೆಗಳು ಸೇರಿದಂತೆ ಒಟ್ಟು 1,000 ಕರ್ನಾಟಕ ಪಬ್ಲಿಕ್ ಶಾಲೆಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆ. ಸರ್ಕಾರಿ ಶಾಲೆಗಳಲ್ಲಿ ಕೃತಕ ಬುದ್ಧಿಮತ್ತೆ (ಎಐ) ತರಬೇತಿ, ಮಾತನಾಡುವ ಇಂಗ್ಲಿಷ್, ಕೌಶಲ್ಯಾಭಿವೃದ್ಧಿ ಹಾಗೂ ದ್ವಿಭಾಷಾ ಬೋಧನೆ ಆರಂಭಿಸಲಾಗಿದೆ. 1ರಿಂದ 12ನೇ ತರಗತಿ ವಿದ್ಯಾರ್ಥಿಗಳಿಗೆ ಉಚಿತ ನೋಟ್‌ಬುಕ್ ವಿತರಿಸುವ ಯೋಜನೆಯೂ ಜಾರಿಯಾಗಲಿದೆ ಎಂದರು.

**ಎಐ ವಿಶ್ವವಿದ್ಯಾಲಯ ಸ್ಥಾಪನೆ ಚಿಂತನೆ**

ಉನ್ನತ ಶಿಕ್ಷಣ ಸಚಿವ ಬಸವರಾಜ ರಾಯರೆಡ್ಡಿ ಮಾತನಾಡಿ, ತಾಂತ್ರಿಕ ಪ್ರಗತಿಗೆ ಅನುಗುಣವಾಗಿ ರಾಜ್ಯದಲ್ಲಿ ಪ್ರತ್ಯೇಕ ಎಐ ವಿಶ್ವವಿದ್ಯಾಲಯ ಸ್ಥಾಪಿಸುವ ಕುರಿತು ಸರ್ಕಾರ ಚಿಂತನೆ ನಡೆಸಿದೆ. ಸರ್ಕಾರಿ ಕೋಟಾದ ಇಂಜಿನಿಯರಿಂಗ್ ಸೀಟುಗಳು ಖಾಲಿ ಉಳಿಯುತ್ತಿರುವ ಕಾರಣ ಪರಿಶೀಲಿಸಲು ತಜ್ಞರ ಸಮಿತಿ ರಚಿಸಲಾಗುವುದು ಎಂದರು.

ಕೆಇಎ ಮೂಲಕ 2,000 ಕಾಲೇಜು ಉಪನ್ಯಾಸಕರನ್ನು ಮೆರಿಟ್ ಆಧಾರದ ಮೇಲೆ ಪಾರದರ್ಶಕವಾಗಿ ನೇಮಕ ಮಾಡುವ ಜೊತೆಗೆ ವಿಶ್ವವಿದ್ಯಾಲಯಗಳಲ್ಲಿ 1,000 ಪ್ರಾಧ್ಯಾಪಕರ ನೇಮಕಾತಿ ಪ್ರಕ್ರಿಯೆ ಶೀಘ್ರ ಆರಂಭಿಸಲಾಗುವುದು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ರಾಜ್ಯ ಮತ್ತು ಜಿಲ್ಲಾ ಮಟ್ಟದ ಪ್ರಶಸ್ತಿ ಪುರಸ್ಕೃತ ಶಿಕ್ಷಕರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು. ವಿಧಾನಪರಿಷತ್ ಸಭಾಪತಿ ಸಲೀಂ ಅಹ್ಮದ್, ಸಚಿವರಾದ ಕೃಷ್ಣ ಬೈರೇಗೌಡ, ರಿಜ್ವಾನ್ ಅರ್ಷದ್, ವಿಧಾನಪರಿಷತ್ ಸದಸ್ಯರಾದ ಪುಟ್ಟಣ್ಣ, ರಾಮೋಜಿಗೌಡ ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿದ್ದರು.

www.VIKRAMAVAHINI.com
ಕನ್ನಡ ದಿನಪತ್ರಿಕೆ
PRGI NO: KARKAN/2018/78481
ವಿಕ್ರಮ ವಾಹಿನಿ

### ಸವಿ ವಾಹಿನಿ

ಬ್ಯುಸಿ ಇದ್ದಷ್ಟು ಸಮಾಧಾನ. ಖಾಲಿ ಇದ್ದಷ್ಟು ಯೊಚನೆಗಳು. ದುಡಿತಾ ಇದ್ದಷ್ಟು ಶ್ರೀಮಂತಿಕೆ. ದರಿದ್ರ.. ಸೋಮಾರಿಯಾದಷ್ಟು ಕಲಿಯುತ್ತಾ ಇದ್ದಷ್ಟು ಕಲಿಕೆ. ತಿಳಿಯುತ್ತ ಹೋದಷ್ಟು ತಿಳುವಳಿಕೆ.

### ದಿನ ಪಂಚಾಂಗ

ಸೆಪ್ಟಂಬರ್, 06-2026, ಭಾನುವಾರ ವರ್ಷ ಋತು, ಶ್ರಾವಣ ಮಾಸ, ಬಹುಳ ಪಕ್ಷ. ದಶಮಿ ತಿಥಿ ಸಾ-06:35
ಆರ್ದ್ರಾ ನಕ್ಷತ್ರ ರಾ-08:06
ರಾಹುಕಾಲ ಬೆ-04:54-06:27
ರಾಷ್ಟ್ರೀಯ ಪುಸ್ತಕ ಓದುವ ದಿನ, ಶಿಕ್ಷ್ಯೋತ್ಸವ, ಹೆಮ್ಮರಗಾಲ ಕೃಷ್ಣೋತ್ಸವ, ಹದಗಾಂವಮಠ ಬಸವಲಿಂಗ ಪುಣ್ಯತಿಥಿ

### ಆಧ್ಯಾತ್ಮ

## ಪಾಪಗಳು ಸೇರುವ ಬಹುಮುಖ್ಯ ದ್ವಾರ ಆಹಾರ



● ವಿಕ್ರಮ ವಾಹಿನಿ । ಗೋಕರ್ಣ

ವೇಗನ್ ಸಿದ್ಧಾಂತ ಹಾಲು – ತುಪ್ಪಗಳನ್ನು ಹಿಂಸೆಯ ವ್ಯಾಪ್ತಿಯಲ್ಲಿ ಸೇರಿಸಿದೆ. ಅಹಿಂಸಾತ್ಮಕವಾದ ಆ ಸಿದ್ಧಾಂತ ಸರಿ ಇದ್ದರು, ಗೋವಿನ ಉತ್ಪನ್ನಗಳನ್ನು ಆ ವ್ಯಾಪ್ತಿಯಲ್ಲಿ ಸೇರಿಸುವ ಅಗತ್ಯವಿಲ್ಲ. ಗೋವಿನಲ್ಲಿ ಉತ್ಪತ್ತಿಯಾಗುವ ಹಾಲು ಕರುವಿನ ಅಗತ್ಯಕ್ಕಿಂತ ಹೆಚ್ಚಿರುತ್ತದೆ ಮತ್ತು ಹಾಲು ಕರೆಯುವಾಗ ಕರುವಿನ ಹಾಲನ್ನು ಬಿಟ್ಟು, ಉಳಿದ ಹಾಲನ್ನು ಮಾತ್ರ ಹಿಂಡುವ ಕ್ರಮ ಭಾರತದ ಉದ್ದಗಲಕ್ಕೂ ಇದೆ. ಹಾಗಾಗಿ ಹಾಲು – ತುಪ್ಪಗಳ ಹಿಂದೆ ಪ್ರಾಣಿ ಹಿಂಸೆ ಇಲ್ಲ ಎಂದು ಶ್ರೀರಾಮಚಂದ್ರಾಪುರ ಮಠದ ಜಗದ್ಗುರು ಶಂಕರಾಚಾರ್ಯ ಶ್ರೀಶ್ರೀ ರಾಘವೇಶ್ವರ ಭಾರತೀ ಮಹಾಸ್ವಾಮಿಗಳು ಹೇಳಿದರು.

ಗೋಕರ್ಣದ ಅಶೋಕೆಯ ಮೂಲಮಠದ ಪರಿಸರದಲ್ಲಿ ನಡೆಯುತ್ತಿರುವ 'ಅನ್ನಬ್ರಹ್ಮ ಚಾತುರ್ಮಾಸ್ಯ'ದ ಧರ್ಮಸಭೆಯಲ್ಲಿ 05.09.2026 ರಂದು 'ಅನ್ನಂ ಬ್ರಹ್ಮ' ಮಾಲಿಕೆಯಲ್ಲಿ ಪ್ರವಚನ ಅನುಗ್ರಹಿಸಿದ ಶ್ರೀಗಳು, ಮನುಷ್ಯ ಜಾತಿಯ ಎಲ್ಲರಿಗೂ ಹೊಂದುವಂತಹ ಆಹಾರ ಎಂಬುದಾಗಿ ನೀರು – ತುಪ್ಪ – ಹಾಲು – ಅಕ್ಕಿಗಳನ್ನು ಆಯುರ್ವೇದ ಗುರುತಿಸಿದ್ದು, ಇವುಗಳನ್ನು 'ಜಾತಿ ಸಾತ್ಮ್ಯ' ಎಂಬುದಾಗಿ ಆಯುರ್ವೇದ ಗುರುತಿಸಿದೆ. ಇದು ಎಲ್ಲಾ ಪ್ರಕೃತಿಯ ಜೀವಿಗಳಿಗೂ ಒಗ್ಗುವ ಆಹಾರಗಳಾಗಿವೆ. ಹಾಗೆಯೇ ಈ ಪದಾರ್ಥಗಳನ್ನು ಆಯುರ್ವೇದ ಸೂಚಿಸಿರುವ ಹಿನ್ನೆಲೆಯಲ್ಲಿ ಕರ್ಮ ಸಿದ್ಧಾಂತದ ಪಾತ್ರವೂ ಇದ್ದು, ಈ ನಾಲ್ಕು ಪದಾರ್ಥಗಳಲ್ಲಿ ಪ್ರಾಣಿ ಹಿಂಸೆಯ ಪಾಲು ಇಲ್ಲವೇ ಇಲ್ಲ ಎನ್ನುವಷ್ಟೇ ಇದೆ ಎಂದು ಆಹಾರದಲ್ಲಿ ಕರ್ಮ ಸಿದ್ಧಾಂತದ ವಿಚಾರವನ್ನು ಪ್ರತಿಪಾದಿಸಿದರು.

ಸಸ್ಯಾಹಾರವನ್ನು ತಯಾರಿಸುವಾಗಲು ಸೂಕ್ಷ್ಮ ಜೀವಿಗಳೂ ಸೇರಿದಂತೆ ಕೆಲವು ಜೀವಿಗಳಿಗೆ ಹಿಂಸೆಯಾಗಬಹುದು. ಈ ಹಿನ್ನೆಲೆಯಲ್ಲೇ ಗೃಹಸ್ಥರಿಗೆ 'ವೈಶ್ವದೇವ'ವನ್ನು ಶಾಸ್ತ್ರಗಳು ಸೂಚಿಸಿದ್ದು, ಅಡುಗೆ ಮಾಡುವಾಗ ಮಾಡಿದ ಹಿಂಸೆಯ ಪ್ರಾಯಶ್ಚಿತ್ತಕ್ಕೆ ಇರುವ ಕ್ರಮ ಇದಾಗಿದೆ ಎಂದು ಹೇಳಿದರು.

ಬೆಂಗಳೂರು ದಕ್ಷಿಣ ಹವ್ಯಕ ಮಂಡಲದ ಸರ್ವಧಾರಿ, ಜಯಪ್ರಕಾಶ, ಸೋಮೇಶ್ವರ, ಕೋರಮಂಗಲ ವಲಯಗಳ ಪರವಾಗಿ ಎ ರಾಮ ಭಟ್ಟ ಕುಟುಂಬದವರು ಗುರುಭಿಕ್ಷಾಸೇವೆ ಸಮರ್ಪಿಸಿದರು. ಮೋಹನ ಭಾಸ್ಕರ ಹೆಗಡೆ, ಜಿ.ಜಿ. ಹೆಗಡೆ, ಎನ್. ಜಿ. ಭಾಗ್ವತ್, ಅನಿತಾ ಭಟ್, ಅರ್ಚನಾ ಕುರುವೇರಿ, ದಿನಪ್ರಧಾನರಾಗಿ ಬೇರ್ಕಡವು ಶ್ಯಾಮ ಭಟ್ ದಂಪತಿಗಳು ಉಪಸ್ಥಿತರಿದ್ದರು. ಕೃಷ್ಣಾಷ್ಟಮಿ ಸಂಭಮ: ಕೃಷ್ಣಾಷ್ಟಮಿಯ ಅಂಗವಾಗಿ ಧಾರ್ಮಿಕ ಕಾರ್ಯಕ್ರಮಗಳು ಹಾಗೂ ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು. ಮಕ್ಕಳಿಗಾಗಿ ಮೊಸರು ಕಡೆಯುವುದು, ಹಗ್ಗ ಜಗ್ಗಾಟ, ಬಾಳೆಗೊನೆ ಸ್ಪರ್ಧೆ, ಗೋವುಗಳೊಂದಿಗೆ ಮಕ್ಕಳು, ಶ್ರೀಕೃಷ್ಣ ರೂಪಕ ಸೇರಿದಂತೆ ಹಲವಾರು ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು.

# ಅಂಜನಾದೇವಿಯ ದರ್ಶನ ಪಡೆದವರು ಮಾತ್ರ ಶ್ರೀ ಅಂದಿಗಾಲೀಶ ಗುಡ್ಡ ಹತ್ತಬೇಕು..!

ನಾವು ಯಾವುದೇ ಪವಿತ್ರ ಕ್ಷೇತ್ರಕ್ಕೆ ಭೇಟಿ ನೀಡಿದಾಗ, ಆ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಕೆಲವು ಸಾಂಪ್ರದಾಯಿಕ ಆಚರಣೆಗಳು ಹಾಗೂ ನಂಬಿಕೆಗಳು ಇರುತ್ತವೆ. ಆ ಸಂಪ್ರದಾಯಗಳನ್ನು ಪಾಲಿಸಿದಾಗಲೇ ಯಾತ್ರೆಯ ಸಂಪೂರ್ಣ ಧಾರ್ಮಿಕ ಫಲ ದೊರೆಯುತ್ತದೆ ಎಂಬುದು ಭಕ್ತರ ನಂಬಿಕೆ.

ಉದಾಹರಣೆಗೆ, ಧರ್ಮಸ್ಥಳದ ಶ್ರೀ ಮಂಜುನಾಥ ಸ್ವಾಮಿಯ ದರ್ಶನಕ್ಕೆ ತೆರಳುವವರು ಅಣ್ಣಪ್ಪ ಸ್ವಾಮಿಯ ಆಶೀರ್ವಾದ ಪಡೆಯುವುದು ಸಂಪ್ರದಾಯ. ಸವದತ್ತಿ ಯಲ್ಲಮ್ಮ ಕ್ಷೇತ್ರಕ್ಕೆ ತೆರಳುವವರು ಜೋಗುಳಬಾವಿ ಸತ್ಯಮ್ಮನ ದರ್ಶನದೊಂದಿಗೆ ಕ್ಷೇತ್ರದ ಪರಂಪರೆಯನ್ನು ಪಾಲಿಸುತ್ತಾರೆ. ಕಾಶಿ ವಿಶ್ವನಾಥನ ದರ್ಶನ ಪಡೆದವರು ರಾಮೇಶ್ವರ ಕ್ಷೇತ್ರಕ್ಕೂ ಭೇಟಿ ನೀಡಬೇಕು ಎಂಬ ನಂಬಿಕೆಯೂ ಇದೆ.

ಅದೇ ರೀತಿ ಶ್ರೀ ಅಂದಿಗಾಲೀಶನ ದರ್ಶನ ಪಡೆಯುವವರು ತಾಯಿ ಅಂಜನಾದೇವಿಯ ದರ್ಶನವನ್ನೂ ಪಡೆಯಬೇಕು ಎಂಬ ಸ್ಥಳೀಯ ಭಕ್ತರ ನಂಬಿಕೆ ಇದೆ. ಆಗ ಮಾತ್ರ ಅಂದಿಗಾಲೀಶ ಗುಡ್ಡ ಹತ್ತಿದ ಯಾತ್ರೆಯ ಸಂಪೂರ್ಣ ಧಾರ್ಮಿಕ ಫಲ ದೊರೆಯುತ್ತದೆ ಎಂಬುದು ಭಕ್ತರ ಭಾವನೆ.

ಈ ನಂಬಿಕೆಯನ್ನು ಶಹಪುರ ಗ್ರಾಮದ ಖ್ಯಾತ ಜ್ಯೋತಿಷಿ ಶ್ರೀ ವೀರಣ್ಣ ಜೋಷಿ ಮತ್ತು ಧಾರ್ಮಿಕ ವಿಚಾರವಾದಿ ಶ್ರೀ ವೀರಣ್ಣ ಕೋಮಲಾಪುರ ಅವರೂ ವ್ಯಕ್ತಪಡಿಸುತ್ತಾರೆ.

**ಅಂದಿಗಾಲೀಶ ಗುಡ್ಡ ಎಲ್ಲಿದೆ?**

ಶ್ರೀ ಅಂದಿಗಾಲೀಶ ಗುಡ್ಡವು ಕೊಪ್ಪಳ, ಹೊಸಪೇಟೆ ಹಾಗೂ ಗಂಗಾವತಿ ಪ್ರದೇಶಗಳ ಮಧ್ಯಭಾಗದಲ್ಲಿದೆ. ಈ ಮೂರು ನಗರಗಳ ಪೈಕಿ ಯಾವುದೇ ಕಡೆಯಿಂದ ಪ್ರಯಾಣಿಸಿದರೂ ಸುಮಾರು ಅರ್ಧ ಗಂಟೆಯೊಳಗೆ ಗುಡ್ಡದ ತಪ್ಪಲನ್ನು ತಲುಪಬಹುದು.

ಅಗಳಕೇರಿ ಸಮೀಪ ತುಂಗಭದ್ರಾ ಎಡದಂಡೆ ಕಾಲುವೆಯನ್ನು ದಾಟಿ ಗುಡ್ಡವನ್ನು ಹತ್ತಿದಾಗ ಶಿಖರದಲ್ಲಿ ಶ್ರೀ ಅಂದಿಗಾಲೀಶನ ಪವಿತ್ರ ಸನ್ನಿಧಿ ಕಾಣಸಿಗುತ್ತದೆ.

ಈ ಗುಡ್ಡವು ವಿಶಾಲ ಕಿಷ್ಕಿಂಧಾ ಪ್ರದೇಶದ ವ್ಯಾಪ್ತಿಯಲ್ಲಿ ಬರುವುದರಿಂದ ಪೌರಾಣಿಕ ಮಹತ್ವವನ್ನೂ ಹೊಂದಿದೆ ಎಂಬುದು ಸ್ಥಳೀಯರ ನಂಬಿಕೆ. ಐತಿಹಾಸಿಕವಾಗಿ ವಿಜಯನಗರ ಪ್ರದೇಶದ ಪಶ್ಚಿಮ ದ್ವಾರವೆಂದು ಪರಿಗಣಿಸಲಾಗುವ ಕೆರೆಹಳ್ಳಿಯಿಂದ ಪೂರ್ವದತ್ತ ಅಗಳಕೇರಿಯ ಮೂಲಕ ಗುಡ್ಡ ಪ್ರದೇಶ ವಿಸ್ತರಿಸಿದೆ. ಅದರ ಶಿಖರದಲ್ಲಿ ಶ್ರೀ ಅಂದಿಗಾಲೀಶನ ಸನ್ನಿಧಿ ನೆಲೆಸಿದೆ.

ವರ್ಷದ ಎಲ್ಲಾ ದಿನಗಳಲ್ಲಿಯೂ ಗುಡ್ಡದ ಮೇಲೆ ಬೀಸುವ ತಂಪಾದ ಗಾಳಿ ಭಕ್ತರನ್ನು ಆಕರ್ಷಿಸುತ್ತದೆ. ಈ ಗಾಳಿಯ ಸ್ಪರ್ಶದಿಂದ ವಿಶೇಷವಾದ ಭಕ್ತಿ ಹಾಗೂ ಆಧ್ಯಾತ್ಮಿಕ ವಾತಾವರಣವನ್ನು ಅನುಭವಿಸುತ್ತೇವೆ ಎಂಬುದು ಭಕ್ತರ ಭಾವನೆ.

ವಾಯುದೇವರು, ಅಂಜನಾದೇವಿ ಹಾಗೂ ಶ್ರೀ ಅಂದಿಗಾಲೀಶನ ಸಾನ್ನಿಧ್ಯ ಇಲ್ಲಿ ಆಧ್ಯಾತ್ಮಿಕವಾಗಿ ಅನುಭವವಾಗುತ್ತದೆ ಎಂಬ ನಂಬಿಕೆಯಿದೆ. ಇಲ್ಲಿ ಕಾಣದಂತಹ, ವರ್ಣಿಸಲಾಗದ ವಿಶೇಷ ಶಕ್ತಿ ಹಾಗೂ ದೈವಿಕ ಪ್ರಭೆ ಇದೆ ಎಂದು ಸ್ಥಳೀಯರು ಹೇಳುತ್ತಾರೆ.

**ಜಾತ್ರೆ ಯಾವಾಗ ನಡೆಯುತ್ತದೆ?:** ಪ್ರತಿ ವರ್ಷ ಶ್ರಾವಣ ಮಾಸದ ಕೊನೆಯ ಶನಿವಾರ ಶ್ರೀ ಅಂದಿಗಾಲೀಶನ ಜಾತ್ರೆ ನಡೆಯುತ್ತದೆ. ಗುಡ್ಡದ ವಿವಿಧ ಭಾಗಗಳಲ್ಲಿ ಪ್ರಾಚೀನ ಶಿಲಾಯುಗಕ್ಕೆ ಸೇರಿದವು ಎಂದು ನಂಬಲಾಗುವ ಕುರುಹುಗಳು ಕಂಡುಬರುತ್ತವೆ ಎನ್ನಲಾಗುತ್ತದೆ. ಹೀಗಾಗಿ ಇತಿಹಾಸ ಸಂಶೋಧಕರು, ಪ್ರಕೃತಿ ಪ್ರಿಯರು, ಏಕಾಂತ ಹಾಗೂ ಆತ್ಮಚಿಂತನೆ ಬಯಸುವವರು, ಸಾಹಸಪ್ರಿಯ ಯುವಕರು ಮತ್ತು ಆಧ್ಯಾತ್ಮಿಕ ಅನುಭವ ಬಯಸುವ ಭಕ್ತರಿಗೆ ಈ ಪ್ರದೇಶ ವಿಶೇಷ ಆಕರ್ಷಣೆಯಾಗಿದೆ.

ಪ್ರತಿ ವರ್ಷ ಶ್ರೀ ಅಂದಿಗಾಲೀಶ ಗುಡ್ಡ ಹತ್ತುವ ಭಕ್ತರ ಸಂಖ್ಯೆ ಹೆಚ್ಚುತ್ತಿದೆ. ಅಗಳಕೇರಿ, ಶಿವಪುರ ಹಾಗೂ ಶಹಪುರ ಗ್ರಾಮಗಳ ಜನರು ಸೇರಿ ಗುಡ್ಡಕ್ಕೆ 960 ಮೆಟ್ಟಿಲುಗಳನ್ನು ನಿರ್ಮಿಸಿದ್ದಾರೆ. ಈ ವರ್ಷ ಮೆಟ್ಟಿಲು ನಿರ್ಮಿಸಿ ಒಂದು ದಶಕ ಪೂರ್ಣಗೊಳ್ಳುತ್ತಿದೆ. ಈ ಹಿನ್ನೆಲೆಯಲ್ಲಿ ಸಾವಿರಾರು ಭಕ್ತರು ಜಾತ್ರೆಯಲ್ಲಿ ಭಾಗವಹಿಸುವ ನಿರೀಕ್ಷೆಯಿದೆ.

ಜಾತ್ರೆಯ ದಿನ ಬೆಳಿಗ್ಗೆ ಅಗಳಕೇರಿ ಗ್ರಾಮದಿಂದ ಶ್ರೀ ಅಂದಿಗಾಲೀಶನ ಮೂರ್ತಿಯನ್ನು ಪಲ್ಲಕ್ಕಿ ಉತ್ಸವದ ಮೂಲಕ ಗುಡ್ಡಕ್ಕೆ ಕರೆತರಲಾಗುತ್ತದೆ. ಗುಡ್ಡದ ಮೇಲಿರುವ ಸನ್ನಿಧಿಯಲ್ಲಿ ವಿಶೇಷ ಪೂಜೆ ಹಾಗೂ ಧಾರ್ಮಿಕ ವಿಧಿ ವಿಧಾನಗಳು ನಡೆಯುತ್ತವೆ.

### ಗುಡ್ಡದ ಮೇಲಿರುವ ವಿಶೇಷತೆಗಳೇನು?



ಗುಡ್ಡವು ದೊಡ್ಡ ದೊಡ್ಡ ಬಂಡೆಗಳು ಹಾಗೂ ಕಲ್ಲುಗಳಿಂದ ಆವೃತವಾಗಿದೆ. ದೈಹಿಕವಾಗಿ ಸದೃಢರಾಗಿರುವವರು ಈ ನೈಸರ್ಗಿಕ ಬಂಡೆಗಳ ನಡುವೆ ಗುಡ್ಡ ಹತ್ತಿ ಸಂಚರಿಸುವ ಅನುಭವ ಪಡೆಯಬಹುದು.

ಟ್ರೆಕ್ಕಿಂಗ್ ಹಾಗೂ ಪ್ರಕೃತಿ ಪ್ರಿಯರಿಗೆ ಗುಡ್ಡದಲ್ಲಿರುವ ಗುಹೆಗಳು, ಬಂಡೆಗಳ ಆಶ್ರಯ ತಾಣಗಳು ವಿಶೇಷ ಆಕರ್ಷಣೆಯಾಗಿವೆ. ನೈಸರ್ಗಿಕ ಕಲ್ಲುಬಂಡೆಗಳು ರಾಕ್ ಕ್ಲೈಂಬಿಂಗ್ ಹಾಗೂ ಛಾಯಾಗ್ರಹಣಕ್ಕೂ ಸೂಕ್ತವಾಗಿವೆ.

ಗುಡ್ಡದ ಮೇಲೆ ದೊಡ್ಡ ಹುತ್ತವೊಂದಿದೆ. ಸಂತಾನ ಪ್ರಾಪ್ತಿಗಾಗಿ ಹಾಗೂ ಚರ್ಮರೋಗ ನಿವಾರಣೆಗಾಗಿ ಭಕ್ತರು ಇಲ್ಲಿ ಪ್ರಾರ್ಥನೆ ಸಲ್ಲಿಸುತ್ತಾರೆ. ಹುತ್ತದ ಮೇಲೆ ಹೆಡೆ ಎತ್ತಿದ ಸರ್ಪದ ಹೆಡೆಯನ್ನು ಹೋಲುವ ಬೃಹತ್ ಬಂಡೆಯೊಂದಿದೆ.

ಕುಕ್ಕೆ ಸುಬ್ರಹ್ಮಣ್ಯಕ್ಕೆ ತೆರಳಲು ಸಾಧ್ಯವಾಗದವರು ಇಲ್ಲಿಯೇ ಸರ್ಪಾಕಾರದ ಈ ಸನ್ನಿಧಿಯಲ್ಲಿ ಪೂಜೆ ಸಲ್ಲಿಸಿದರೆ ಸರ್ಪದೋಷದಿಂದ ಪರಿಹಾರ ದೊರೆಯುತ್ತದೆ ಎಂಬ ನಂಬಿಕೆಯೂ ಇದೆ.

ಗುಡ್ಡದ ತಪ್ಪಲಿನಲ್ಲಿ ಅಂಜನಾದೇವಿ ಉದ್ಯಾನವನವಿದೆ. ಪೂರ್ವದ ಭಾಗದಲ್ಲಿ 'ಕೋತಿ ಗುಂಡು" ಎಂಬ ನೈಸರ್ಗಿಕ ಜಲಮೂಲವಿದ್ದು, ವರ್ಷಪೂರ್ತಿ ನೀರು ಸಂಗ್ರಹವಾಗಿರುತ್ತದೆ ಎಂದು ಸ್ಥಳೀಯರು ಹೇಳುತ್ತಾರೆ

ಹೊಟ್ಟೆಯ ತೊಂದರೆಗಳಿಂದ ಬಳಲುವ ಭಕ್ತರು ಈ ನೀರನ್ನು ಸಂಗ್ರಹಿಸಿ ಶ್ರೀ ಅಂದಿಗಾಲೀಶನ ಪಾದದ ಕೆಳಗೆ ಇಟ್ಟು, ಧೂಪ ಹಚ್ಚಿ ಮನೆಗೆ ತೆಗೆದುಕೊಂಡು ಹೋಗುತ್ತಾರೆ. ಅದನ್ನು ನಿಯಮಿತವಾಗಿ ಸೇವಿಸಿದರೆ ತೊಂದರೆ ಕಡಿಮೆಯಾಗುತ್ತದೆ ಎಂಬುದು ಸ್ಥಳೀಯ ಭಕ್ತರ ನಂಬಿಕೆ. ಗುಡ್ಡದ ಈಶಾನ್ಯ ಭಾಗದಲ್ಲಿ 'ಯೋನಿಕುಂಡ" ಇದೆ. ಸಾಮೂಹಿಕ ಅನ್ನಸಂತರ್ಪಣೆಗಾಗಿ ಅಡುಗೆ ಮಾಡುವ ಸಂದರ್ಭದಲ್ಲಿ ಇಲ್ಲಿನ ಪವಿತ್ರ ನೀರನ್ನು ಬಳಸುವ ಸಂಪ್ರದಾಯವಿದೆ.

ಗುಡ್ಡದಾದ್ಯಂತ ನೈಸರ್ಗಿಕವಾಗಿ ರೂಪುಗೊಂಡಿರುವ ಕಲ್ಲುಬಂಡೆಗಳು ಟ್ರೆಕ್ಕಿಂಗ್ ಹಾಗೂ ಸಾಹಸ ಪ್ರವಾಸಕ್ಕೆ ಅನುಕೂಲವಾಗಿವೆ. ಮಕ್ಕಳಿಗೆ ಹಾಗೂ ಯುವಕರಿಗೆ ಈ ನೈಸರ್ಗಿಕ ಪ್ರದೇಶ ವಿಶೇಷ ಆಕರ್ಷಣೆಯಾಗಿದೆ.

ದಿನವಿಡೀ ಅಗಳಕೇರಿ ಗ್ರಾಮಸ್ಥರ ವತಿಯಿಂದ ಅನ್ನದಾಸೋಹ ವ್ಯವಸ್ಥೆ ಮಾಡಲಾಗುತ್ತದೆ.

ಮುಸಲಾಪುರ, ಚಂದ್ರಗಿರಿ, ನಾಗೇಶನಹಳ್ಳಿ, ಬಿಳೆಬಾವಿ, ಲಿಂಗದಹಳ್ಳಿ, ಯಡ್ಡಳ್ಳಿ, ಹಳೆ ಕುಮಟಾ, ಬಸಾಪುರ, ಸಣಾಪುರ, ಹಿಟ್ನಾಳ ಹಾಗೂ ಕಂಪಸಾಗರ ಸೇರಿದಂತೆ ಸುತ್ತಮುತ್ತಲಿನ ಅನೇಕ ಗ್ರಾಮಗಳಿಂದ ಭಕ್ತರು ಜಾತ್ರೆಗೆ ಆಗಮಿಸುತ್ತಾರೆ.

ಶಹಪುರದ ಭಕ್ತರು ಹಳೆ ಕೊಳ್ಳಿನ ಕೆರೆ, ಜಾತಿಗನಡು, ಕಾರೆ ಕಲ್ಲು, ಅಮಲಮ್ಮನ ದೋಣಿ, ಮೇದರ ದೋಣಿ, ಸಿರಿಗನ ಅರುವು ಹಾಗೂ ರಾಗೇರಿ ಮುಳಿ ರಸ್ತೆ ಮಾರ್ಗವಾಗಿ ಗುಡ್ಡ ಹತ್ತುವ ಪರಂಪರೆಯಿದೆ.

ಇತ್ತೀಚಿನ ವರ್ಷಗಳಲ್ಲಿ ಬೆಂಗಳೂರು ಸೇರಿದಂತೆ ಕರ್ನಾಟಕದ ವಿವಿಧ ಭಾಗಗಳಿಂದಲೂ ಭಕ್ತರು ಶ್ರೀ ಅಂದಿಗಾಲೀಶ ಗುಡ್ಡಕ್ಕೆ ಭೇಟಿ ನೀಡುತ್ತಿದ್ದಾರೆ.

**ಗುಡ್ಡ ಏಕೆ ಹತ್ತಬೇಕು?:** ಶ್ರೀ ಅಂದಿಗಾಲೀಶನು ವಿಶಾಲ ಅಂಜನಾದ್ರಿ ಪ್ರದೇಶದ ವ್ಯಾಪ್ತಿಯಲ್ಲಿ ನೆಲೆಸಿದ್ದಾನೆ ಎಂಬ ಸ್ಥಳೀಯ ನಂಬಿಕೆಯಿದೆ. ರಾಮಾಯಣ ಹಾಗೂ ಕಿಷ್ಕಿಂಧೆಯೊಂದಿಗೆ ಸಂಬಂಧ ಹೊಂದಿರುವ ಪೌರಾಣಿಕ ಭೂ ಪ್ರದೇಶವೆಂಬ ನಂಬಿಕೆಯೂ ಈ ಪ್ರದೇಶಕ್ಕಿದೆ.

ಅಂದಿಗಾಲೀಶ ಗುಡ್ಡ ಹತ್ತುವಾಗ ಬೀಸುವ ತಂಪಾದ ಗಾಳಿಯ ಸ್ಪರ್ಶ ಮನಸ್ಸಿಗೆ ನೆಮ್ಮದಿ ನೀಡುತ್ತದೆ. ಮನಸ್ಸು ಶಾಂತವಾಗಿ, ಪರಿಶುದ್ಧವಾಗುತ್ತದೆ ಎಂಬುದು ಭಕ್ತರ ಅನುಭವ.

ಕೇಸರಿಯ ಪತ್ನಿ ಅಂಜನಾದೇವಿಯು ಇದೇ ಪ್ರದೇಶದಲ್ಲಿ ಮಹಾಬಲಶಾಲಿಯಾದ ವಾನರ ವೀರನಿಗೆ ಜನ್ಮ ನೀಡಿದಳು ಎಂಬ ನಂಬಿಕೆ ಇಲ್ಲಿನ ಜನರಲ್ಲಿ ಬೇರೂರಿದೆ.

ವಿಷ್ಣುವಿನಂತೆ ಭಕ್ತರನ್ನು ಉದ್ಧರಿಸುವ, ರುದ್ರನಂತೆ ದುಷ್ಟಶಕ್ತಿಗಳನ್ನು ನಾಶಪಡಿಸುವ ಹಾಗೂ ಬ್ರಹ್ಮನಂತೆ ಆತ್ಮವಿಶ್ವಾಸವನ್ನು ತುಂಬುವ ಶಕ್ತಿ ಶ್ರೀ ಅಂದಿಗಾಲೀಶನಲ್ಲಿದೆ ಎಂದು ಭಕ್ತರು ನಂಬಿದ್ದಾರೆ.

ಹನುಮಂತನು ಸಂಜೀವಿನಿ ಪರ್ವತವನ್ನು ತಂದು ಲಕ್ಷ್ಮಣನ ಪ್ರಾಣ ಉಳಿಸಿದಂತೆ, ಈ ಪ್ರದೇಶದಲ್ಲಿ ದೊರೆಯುವ ಔಷಧೀಯ ಸಸ್ಯಗಳಿಗೂ ಹಲವು ಪ್ರಯೋಜನಕಾರಿ ಗುಣಗಳಿವೆ ಎಂಬ ನಂಬಿಕೆ ಸ್ಥಳೀಯರಲ್ಲಿ ಇದೆ.

ಸೀತೆಯ ಅನ್ವೇಷಣೆಯಲ್ಲಿ ಹನುಮಂತನು ಸಾಗರವನ್ನು ದಾಟಿದ ಕಥೆ ಜನಪದ ನಂಬಿಕೆಯಲ್ಲಿ ಆಳವಾಗಿ ಬೇರೂರಿದೆ. ಅದೇ ರೀತಿ ಜೀವನದಲ್ಲಿ ದಾರಿ ತಪ್ಪಿದವರು ಅಂದಿಗಾಲೀಶ ಗುಡ್ಡ ಹತ್ತಿದರೆ ತಮ್ಮ ಬದುಕಿನ ಉದ್ದೇಶವನ್ನು ಮತ್ತೆ ಕಂಡುಕೊಳ್ಳಬಹುದು ಎಂಬ ಆಧ್ಯಾತ್ಮಿಕ ಭಾವನೆಯೂ ಇದೆ.

ಮಕ್ಕಳಿಗೆ ಜ್ಞಾನ, ಯುವಕರಿಗೆ ವಿವೇಕ ಹಾಗೂ ಭಕ್ತರಿಗೆ ಆಧ್ಯಾತ್ಮಿಕ ಉನ್ನತಿ ಶ್ರೀ ಅಂದಿಗಾಲೀಶನ ಕೃಪೆಯಿಂದ ದೊರೆಯುತ್ತದೆ ಎಂಬುದು ಭಕ್ತರ ನಂಬಿಕೆ.

**ಪೌರಾಣಿಕ ಹಿನ್ನೆಲೆ:** ಈ ಪ್ರದೇಶವು ಅಂಜನಾದ್ರಿ ಭೂಪ್ರದೇಶದ ವ್ಯಾಪ್ತಿಯಲ್ಲಿ ಇರುವುದರಿಂದ ರಾಮಾಯಣದ 'ಕಿಷ್ಕಿಂಧಾ ಕಾಂಡ' ಕ್ಕೆ ಸಂಬಂಧಿಸಿದ ಹಲವು ಕಥೆಗಳು ಇಲ್ಲಿ ಪ್ರಚಲಿತದಲ್ಲಿವೆ.

ವಾನರ ರಾಜ ಕೇಸರಿಯ ಪತ್ನಿ ಅಂಜನಾದೇವಿಯು ಅಪಾರ ಶಕ್ತಿ ಹಾಗೂ ಪರಾಕ್ರಮ ಹೊಂದಿರುವ ಪುತ್ರನನ್ನು ಪಡೆಯಲು ಕಠಿಣ ತಪಸ್ಸು ಮಾಡಿದಳು ಎಂದು ಪೌರಾಣಿಕ ಪರಂಪರೆ ಹೇಳುತ್ತದೆ.

ವಾಯುದೇವರು ಆಕೆಯನ್ನು ಅನುಗ್ರಹಿಸಿ, ದೈವಿಕ ಕೃಪೆಯಿಂದ ಅಸಾಧಾರಣ ಶಕ್ತಿಯನ್ನು ಹೊಂದಿರುವ ಪುತ್ರನು ಜನಿಸುವನು ಎಂದು ಆಶೀರ್ವದಿಸಿದರೆಂಬ ನಂಬಿಕೆಯಿದೆ.

"ಸುಂದರಕಾಂಡ" ಕ್ಕೆ ಸಂಬಂಧಿಸಿದ ಪರಂಪರೆಯಲ್ಲಿ ಉಲ್ಲೇಖವಾಗುವ ನಂಬಿಕೆಯ ಪ್ರಕಾರ, ಅಂದಿಗಾಲೀಶನು ವೈಶಾಖ ಕೃಷ್ಣ ದಶಮಿ, ಶನಿವಾರ, ಪೂರ್ವಾಭಾದ್ರಪದ ನಕ್ಷತ್ರ ಹಾಗೂ ವೈಧೃತಿ ಯೋಗದಲ್ಲಿ ಮಧ್ಯಾಹ್ನ ಜನಿಸಿದನು ಎಂದು ಹೇಳಲಾಗುತ್ತದೆ.

ಶ್ರೀ ಅಂದಿಗಾಲೀಶನು ಅಪಾರ ದೈಹಿಕ ಶಕ್ತಿ ಹಾಗೂ ಆಧ್ಯಾತ್ಮಿಕ ಸಾಮರ್ಥ್ಯ ಹೊಂದಿದವನು; ವಿಷ್ಣುಭಕ್ತ; ಬ್ರಹ್ಮ, ವಿಷ್ಣು, ಮಹೇಶ್ವರ ತತ್ವಗಳನ್ನು ತನ್ನೊಳಗೆ ಹೊಂದಿದವನು; ವೇದ-ವೇದಾಂತಗಳಲ್ಲಿ ಪಾಂಡಿತ್ಯ ಹೊಂದಿದವನು; ವಿವಿಧ ವಿದ್ಯೆಗಳಲ್ಲಿ ಪರಿಣತಿ ಪಡೆದವನು; ಬ್ರಹ್ಮಜ್ಞಾನಿಗಳಲ್ಲಿ ಶ್ರೇಷ್ಠನಾದವನು; ವಿವಿಧ ದಾರ್ಶನಿಕ ಪರಂಪರೆಗಳ ಅನುಯಾಯಿಗಳಿಂದ ಗೌರವಿಸಲ್ಪಟ್ಟವನು; ರತ್ನಖಚಿತ ಕುಂಡಲಗಳಿಂದ ಅಲಂಕರಿಸಲ್ಪಟ್ಟವನು ಹಾಗೂ ಭವ್ಯವಾದ ದೀರ್ಘಕಾಯ ಹೊಂದಿದವನು ಎಂದು ಭಕ್ತಿಪರಂಪರೆಯಲ್ಲಿ ವರ್ಣಿಸಲಾಗಿದೆ.

ಗುಡ್ಡದ ಮೇಲೆ ವಿರಾಜಮಾನವಾಗಿರುವ ಈ ಭವ್ಯ ದೇವತಾ ಸ್ವರೂಪ ಭಕ್ತರಲ್ಲಿ ಭಕ್ತಿ, ಭಯಭಕ್ತಿ ಹಾಗೂ ಆಧ್ಯಾತ್ಮಿಕ ಭಾವವನ್ನು ಮೂಡಿಸುತ್ತದೆ.

**ಗುಡ್ಡದ ಮೇಲೆ ಏನು ಮಾಡಬೇಕು?;** ನೀವು ಹನುಮಂತನ ಭಕ್ತರಾಗಿದ್ದರೆ ಅಥವಾ ವೈಯಕ್ತಿಕ ಬೆಳವಣಿಗೆ ಹಾಗೂ ಆಧ್ಯಾತ್ಮಿಕ ಉನ್ನತಿಯನ್ನು ಬಯಸುತ್ತಿದ್ದರೆ, ಗುಡ್ಡದ ಮೇಲೆ ಸೂಕ್ತವಾದ ಶಾಂತ ಸ್ಥಳದಲ್ಲಿ ಕುಳಿತು ಶ್ರೀ ಮದ್ ಸುಂದರಕಾಂಡವನ್ನು ಪಠಿಸಬಹುದು.

ಅದೇ ರೀತಿ ಹನುಮಾನ್ ಚಾಲೀಸಾ, ಶ್ರೀ ಆಂಜನೇಯ ದಂಡಕಂ, ಶ್ರೀರಾಮ ಅಷ್ಟೋತ್ತರ ಶತನಾಮಾವಳಿ, ಪಂಚಮುಖಿ ಹನುಮತ್ ಕವಚ ಸ್ತೋತ್ರ, ಶ್ರೀರಾಮ ನಾಮಾಮೃತ, ಏಕಾದಶಮುಖಿ ಹನುಮತ್ ಕವಚ, ಮಂತ್ರಾತ್ಮಕ ಮಾರುತಿ ಮಾಲಾ ಮಂತ್ರ, ಶ್ರೀರಾಮ ರಕ್ಷಾ ಸ್ತೋತ್ರ, ಹನುಮತ್ ಕವಚ ಮಾಲಾ ಮಂತ್ರ ಸೂಕ್ತಿ ಸ್ತೋತ್ರ, ಶ್ರೀ ಪರಾಶರ ಸಂಹಿತೆ, ಶ್ರೀ ನಾರದೀಯ ಮಹಾಪುರಾಣ, ಶ್ರೀ ರಾಮಚರಿತಮಾನಸ, ಶ್ರೀ ಹನುಮದ್ ವಿಷಯ ಸರ್ವಸ್ವ, ಶ್ರೀರಾಮ ನಾಮ ಪಾರಾಯಣ, ಪಂಚಮುಖಿ ಹನುಮತ್ ಹೃದಯ, ಸಪ್ತಮುಖಿ ಹನುಮತ್ ಕವಚ ಹಾಗೂ ಶ್ರೀ ವ್ಯಾಸರಾಜರು ರಚಿಸಿದ ಶ್ರೀ ಹನುಮತ್ ಸ್ತೋತ್ರಗಳನ್ನು ಪಠಿಸಬಹುದು.

ಇವೆಲ್ಲವನ್ನೂ ಮಾಡಲು ಸಾಧ್ಯವಾಗದಿದ್ದರೂ ಭಕ್ತಿಯಿಂದ ಶ್ರೀರಾಮನಾಮ ಜಪ ಮಾಡುವುದೇ ಮಹತ್ವದ್ದಾಗಿದೆ. ಗುಡ್ಡ ಹತ್ತಿದ ಭಕ್ತರು ಇಂತಹ ಆಧ್ಯಾತ್ಮಿಕ ಸಾಧನೆಗಳಿಂದ ತಮ್ಮ ಜೀವನದಲ್ಲಿ ದೈವಿಕ ಭಾವನೆ ಹಾಗೂ ಸಕಾರಾತ್ಮಕ ಪರಿವರ್ತನೆಯ ಅನುಭವವಾಗುತ್ತದೆ ಎಂದು ನಂಬುತ್ತಾರೆ.

**ನೀವೂ ಒಮ್ಮೆ ಬಂದು ಅನುಭವಿಸಿ:** ಎಲ್ಲವನ್ನೂ ಚಿಂತಿಸುತ್ತಾ ಕುಳಿತು ಏನು ಪ್ರಯೋಜನ? ಶ್ರೀರಾಮನ ಕೃಪೆ ಇದ್ದಾಗ ಅಸಾಧ್ಯವಾದ ಕಾರ್ಯವೆಂಬುದೇ ಇಲ್ಲ ಎಂಬುದು ಭಕ್ತರ ನಂಬಿಕೆ.

ಶ್ರೀರಾಮನ ಪರಮಭಕ್ತ, ಅಂಜನೇಯನ ಗುಡ್ಡವನ್ನು ಒಮ್ಮೆಯಾದರೂ ಹತ್ತಿ, ಇಲ್ಲಿನ ಪ್ರಕೃತಿ ಸೌಂದರ್ಯ ಹಾಗೂ ಆಧ್ಯಾತ್ಮಿಕ ವಾತಾವರಣದಲ್ಲಿ ನಿಮ್ಮನ್ನು ನೀವು ತೊಡಗಿಸಿಕೊಳ್ಳಬಾರದೇ?

ಅದು ನಿಮ್ಮ ಜೀವನದ ಮರೆಯಲಾಗದ ಅನುಭವವಾಗಬಹುದು.

ಹಿರಣ್ಯನಾಭನನ್ನು ಮೈನಾ(ಕ)ನೊಂದಿಗೆ ಹಾಗೂ ಪ್ರಭಂಜನನನ್ನು ಹನುಮಂತನೊಂದಿಗೆ ಗುರುತಿಸುವ ಸ್ಥಳೀಯ ಪೌರಾಣಿಕ ಪರಂಪರೆಯೂ ಇದೆ. ಈ ಪ್ರದೇಶದ ಪರ್ವತ ಭೂಪ್ರದೇಶದ ನಿರ್ಮಾಣದೊಂದಿಗೆ ಇವರಿಗೆ ಸಂಬಂಧವಿದೆ ಎಂಬ ನಂಬಿಕೆ ಪ್ರಚಲಿತದಲ್ಲಿದೆ.

ನೀವು ಅಂದಿಗಾಲೀಶ ಗುಡ್ಡ ಹತ್ತುವಾಗ ಸುತ್ತಲೂ ಬೃಹತ್ ಬಂಡೆಗಳು, ಕಲ್ಲುಗಳಿಂದ ಕೂಡಿದ ಒರಟಾದ ಭೂಪ್ರದೇಶ ಹಾಗೂ ಕುರುಚಲು ಕಾಡಿನ ಸೌಂದರ್ಯ ಕಾಣಿಸುತ್ತದೆ. ಆಕಾಶದಲ್ಲಿ ತೇಲುವ ಬಿಳಿ ಮೋಡಗಳು ಬೆಟ್ಟಗಳನ್ನು ಅಪ್ಪಿಕೊಂಡಂತೆ ಕಾಣುತ್ತವೆ.

ಹನುಮಂತನು ಮೊದಲು ಪರ್ವತದಂತೆ ಬೃಹತ್ ಸ್ವರೂಪವನ್ನು ತಾಳಿ, ತಕ್ಷಣವೇ ಬೆಕ್ಕಿನ ಮರಿಯಷ್ಟು ಸಣ್ಣ ರೂಪಕ್ಕೆ ಕುಗ್ಗಿದನೆಂದು ರಾಮಾಯಣ ಪರಂಪರೆ ಹೇಳುತ್ತದೆ. ತನ್ನ ನಿಜವಾದ ಶಕ್ತಿಯನ್ನು ಅರಿತು ಬೃಹತ್ ಸ್ವರೂಪ ತಾಳಿದಾಗ ತನ್ನನ್ನು ಬಂಧಿಸಿದ್ದ ಎಲ್ಲ ಅಡೆತಡೆಗಳನ್ನು ಮೀರಿ, ಯೋಗೇಶ್ವರ ಹನುಮಂತನು ಲಂಕೆಯನ್ನು ದಹಿಸಿದನು.

ಅದೇ ಸ್ಫೂರ್ತಿಯಿಂದ ನೀವೂ ಒಮ್ಮೆಯಾದರೂ ಅಂದಿಗಾಲೀಶ ಗುಡ್ಡ ಹತ್ತಿ. ನಿಮ್ಮ ಜೀವನದ ವಿಶಾಲತೆಯನ್ನು ಅನುಭವಿಸಿ.


ಶ್ರೀ ಅಂದಿಗಾಲೀಶನ ಕೃಪೆಯನ್ನು ಬೇಡಿ.

ಇನ್ನಷ್ಟು ದೊಡ್ಡ ಸಾಧನೆ ಮಾಡುವ ಸಂಕಲ್ಪದೊಂದಿಗೆ ಮುನ್ನಡೆಯಿರಿ.

● ವಿ. ಮಲ್ಲಿಕಾರ್ಜುನ ಜೋಷಿ, ಶಹಪುರ.

# ಶಿಕ್ಷಕ ವೃತ್ತಿ ಎಲ್ಲ ಹುದ್ದೆಗಳಿಗಿಂತಲೂ ಮಿಗಿಲಾದದ್ದು: ಖಂಡ್ರೆ

● ವಿಕ್ರಮ ವಾಹಿನಿ । ತುಮಕೂರು




ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ವಿದ್ಯಾರ್ಥಿಗಳಿಗೆ ಕೇವಲ ವಿದ್ಯೆ ಕಲಿಸುವುದಷ್ಟೇ ಶಿಕ್ಷಕರ ಕರ್ತವ್ಯವಲ್ಲ. ಅವರಲ್ಲಿ ಬುದ್ಧಿವಂತಿಕೆ, ನೈತಿಕತೆ, ಚಾರಿತ್ರ್ಯ ಹಾಗೂ ಉತ್ತಮ ಮೌಲ್ಯಗಳನ್ನು ಬೆಳೆಸಿ ಬದುಕಿನಲ್ಲಿ ಯಶಸ್ವಿಯಾಗುವಂತೆ ರೂಪಿಸಬೇಕು ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಈಶ್ವರ ಬಿ. ಖಂಡ್ರೆ ಹೇಳಿದರು.

ಸಿದ್ಧಗಂಗಾಮಠದ ಸನಿವಾಸ ವಿದ್ಯಾಸಂಸ್ಥೆಯಲ್ಲಿ ಶನಿವಾರ ನಡೆದ ಶಿಕ್ಷಕರ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಮಕ್ಕಳನ್ನು ಶಾಲೆಗೆ ಸೇರಿಸುವ ಜವಾಬ್ದಾರಿ ಪೋಷಕರದ್ದಾದರೆ, ಶಾಲೆಗೆ ಸೇರಿದ ಬಳಿಕ ಅವರನ್ನು ಉತ್ತಮ ವ್ಯಕ್ತಿಗಳನ್ನಾಗಿ ರೂಪಿಸುವ ಮಹತ್ತರ ಹೊಣೆ ಶಿಕ್ಷಕರ ಮೇಲಿದೆ. ಒಬ್ಬ ಉತ್ತಮ ಶಿಕ್ಷಕ ಇಡೀ ಒಂದು ಪೀಳಿಗೆಯನ್ನೇ ಬದಲಾಯಿಸಬಲ್ಲರು ಎಂದರು.

ಸಿದ್ಧಗಂಗಾಮಠದ ಶಿಕ್ಷಣ ಸೇವೆಯನ್ನು ಶ್ಲಾಘಿಸಿದ ಖಂಡ್ರೆ, ಸಿದ್ಧಗಂಗೆಯಲ್ಲಿ ಜಾತಿ, ಮತ, ಪಂಥ ಹಾಗೂ ಭಾಷೆಯ ಭೇದವಿಲ್ಲದೆ ವಿದ್ಯಾರ್ಥಿಗಳಿಗೆ ಅನ್ನ, ಆಶ್ರಯ ಮತ್ತು ಅರಿವು ನೀಡಲಾಗುತ್ತಿದೆ. ಲೌಕಿಕ ಶಿಕ್ಷಣದ ಜತೆಗೆ ಸಂಸ್ಕೃತಿ, ಸಂಸ್ಕಾರ ಮತ್ತು ಶಿಸ್ತನ್ನು ಕಲಿಸುವ ಮೂಲಕ ಮಠದ ಸನಿವಾಸ ಶಾಲೆಗಳು ಸಮಾಜಕ್ಕೆ ಉತ್ತಮ ನಾಗರಿಕರನ್ನು ರೂಪಿಸುತ್ತಿವೆ ಎಂದು ಹೇಳಿದರು.

ಲಿಂಗೈಕ್ಯ ಡಾ. ಶಿವಕುಮಾರ ಸ್ವಾಮೀಜಿಯವರ ಸೇವೆಯನ್ನು ಸ್ಮರಿಸಿದ ಅವರು, ಆಧ್ಯಾತ್ಮಿಕ, ಸಾಮಾಜಿಕ ಹಾಗೂ ಶೈಕ್ಷಣಿಕ ಕ್ಷೇತ್ರದಲ್ಲಿ ಅವರು ಹಾಕಿಕೊಟ್ಟ ಭದ್ರ ಬುನಾದಿಯಿಂದ ಸಿದ್ಧಗಂಗಾಮಠ ಇಂದು ಸಾವಿರಾರು ವಿದ್ಯಾರ್ಥಿಗಳ ಬದುಕಿಗೆ ದಾರಿದೀಪವಾಗಿದೆ. 'ಅನ್ನ, ಆಶ್ರಯ, ಅರಿವು' ಎಂಬ ತ್ರಿವಿಧ ದಾಸೋಹದ ಮೂಲಕ ಅವರು ನಡೆಸಿದ ಸೇವೆ ಅವಿಸ್ಮರಣೀಯ ಎಂದು ಬಣ್ಣಿಸಿದರು.

ಸರ್ವಪಲ್ಲಿ ರಾಧಾಕೃಷ್ಣನ್ ಅವರು ರಾಷ್ಟ್ರಪತಿಯಾಗಿದ್ದರೂ ತಮ್ಮನ್ನು ಶಿಕ್ಷಕ ಎಂದು ಗುರುತಿಸಿಕೊಳ್ಳುವುದರಲ್ಲಿ ಹೆಮ್ಮೆಪಡುತ್ತಿದ್ದರು. ಡಾ. ಎ.ಪಿ.ಜೆ. ಅಬ್ದುಲ್ ಕಲಾಂ ಅವರೂ ಶಿಕ್ಷಕ ವೃತ್ತಿಗೆ ವಿಶೇಷ ಗೌರವ ನೀಡುತ್ತಿದ್ದರು. ಹೀಗಾಗಿ ಗುರುವಿನ ಹುದ್ದೆ ಎಲ್ಲ ಹುದ್ದೆಗಳಿಗಿಂತಲೂ ಶ್ರೇಷ್ಠವಾದದ್ದು ಎಂದು ಖಂಡ್ರೆ ಹೇಳಿದರು.

ಇಂದಿನ ಸಮಾಜದಲ್ಲಿ ಜಾತಿ ಮತ್ತು ಧರ್ಮದ ಹೆಸರಿನಲ್ಲಿ ವಿಭಜನೆಯ ವಾತಾವರಣ ಕಂಡುಬರುತ್ತಿರುವ ಸಂದರ್ಭದಲ್ಲಿ ವಿದ್ಯಾರ್ಥಿಗಳಲ್ಲಿ ಸೌಹಾರ್ದ, ಸಹಿಷ್ಣುತೆ, ಸಹೋದರತ್ವ ಹಾಗೂ ಮಾನವೀಯ ಮೌಲ್ಯಗಳನ್ನು ಬೆಳೆಸುವ ಜವಾಬ್ದಾರಿ ಶಿಕ್ಷಕರ ಮೇಲಿದೆ. ಹಣ ಕಳೆದುಕೊಂಡರೆ ಮತ್ತೆ ಗಳಿಸಬಹುದು; ಆದರೆ ಚಾರಿತ್ರ್ಯ ಕಳೆದುಕೊಂಡರೆ ಎಲ್ಲವನ್ನೂ ಕಳೆದುಕೊಂಡಂತಾಗುತ್ತದೆ. ಆದ್ದರಿಂದ ಮಕ್ಕಳನ್ನು ಚಾರಿತ್ರ್ಯವಂತರನ್ನಾಗಿ ರೂಪಿಸುವತ್ತ ಶಿಕ್ಷಕರು ಗಮನಹರಿಸಬೇಕು ಎಂದರು. ದೇಶದ ಮೊದಲ ಗುರು ತಾಯಿಯಾಗಿದ್ದು, ಮಗುವಿನ ಮೊದಲ ಹೆಜ್ಜೆಯಿಂದ ಅಕ್ಷರಾಭ್ಯಾಸದವರೆಗೆ ನಿರಂತರವಾಗಿ ಮಾರ್ಗದರ್ಶನ ನೀಡುತ್ತಾಳೆ. ಸಿದ್ಧಗಂಗಾಮಠದ ಶಾಲೆಗಳಲ್ಲಿ ಶಿಕ್ಷಣ ಪಡೆದ ಅನೇಕರು ಇಂದು ಆಡಳಿತ, ವೈದ್ಯಕೀಯ, ಎಂಜಿನಿಯರಿಂಗ್ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ್ದಾರೆ. ಈ ಶೈಕ್ಷಣಿಕ ಸೇವೆಯ ಹಿಂದೆ ಶ್ರಮಿಸುತ್ತಿರುವ ಪ್ರತಿಯೊಬ್ಬ ಶಿಕ್ಷಕರಿಗೂ ಅಭಿನಂದನೆ ಸಲ್ಲಿಸುವುದಾಗಿ ಖಂಡ್ರೆ ತಿಳಿಸಿದರು. ಕಾರ್ಯಕ್ರಮದಲ್ಲಿ ಸಿದ್ಧಗಂಗಾಮಠದ ಅಧ್ಯಕ್ಷರಾದ ಶ್ರೀ ಶ್ರೀ ಸಿದ್ಧಲಿಂಗ ಮಹಾಸ್ವಾಮೀಜಿ ದಿವ್ಯ ಸಾನ್ನಿಧ್ಯ ವಹಿಸಿದ್ದರು. ಶಾಸಕರಾದ ಬಿ. ಸುರೇಶ್ ಗೌಡ, ಜ್ಯೋತಿ ಗಣೇಶ್ ಸೇರಿದಂತೆ ಹಲವು ಗಣ್ಯರು, ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು.

# ರಾಷ್ಟ್ರೀಯ ಸಾಧಕ ಶಿಕ್ಷಕರಿಗೆ ಎಚ್‌ಎಂಟಿ ವಾಚ್ ಉಡುಗೊರೆ




● ವಿಕ್ರಮ ವಾಹಿನಿ । ನವದೆಹಲಿ

ರಾಷ್ಟ್ರೀಯ ಶಿಕ್ಷಕರ ದಿನಾಚರಣೆ ಅಂಗವಾಗಿ ಶಿಕ್ಷಣ ಕ್ಷೇತ್ರದಲ್ಲಿ ಅತ್ಯುತ್ತಮ ಸಾಧನೆ ಮಾಡಿದ 82 ಶಿಕ್ಷಕರಿಗೆ ಕೇಂದ್ರ ಶಿಕ್ಷಣ ಸಚಿವ ಪ್ರಲ್ಹಾದ ಜೋಶಿ ಅವರು ರಾಷ್ಟ್ರೀಯ ಪ್ರಶಸ್ತಿ ಜತೆಗೆ ಕರ್ನಾಟಕದ ಹೆಮ್ಮೆಯ ಎಚ್‌ಎಂಟಿ ವಾಚ್‌ಗಳನ್ನು ಉಡುಗೊರೆಯಾಗಿ ನೀಡಿ ಗೌರವಿಸಿದರು.

ನವದೆಹಲಿಯಲ್ಲಿ ನಡೆದ ರಾಷ್ಟ್ರೀಯ ಶಿಕ್ಷಕರ ದಿನಾಚರಣೆ ಹಾಗೂ ರಾಷ್ಟ್ರೀಯ ಶಿಕ್ಷಕರ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಹಾಗೂ ಪ್ರಧಾನಿ ನರೇಂದ್ರ ಮೋದಿ ಅವರ ಸಮ್ಮುಖದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಯಿತು. ಈ ಸಂದರ್ಭದಲ್ಲಿ ಪ್ರಶಸ್ತಿ ಪುರಸ್ಕೃತ ಶಿಕ್ಷಕರಿಗೆ ಎಚ್‌ಎಂಟಿ ವಾಚ್ ನೀಡಿ ವಿಶೇಷವಾಗಿ ಅಭಿನಂದಿಸಲಾಯಿತು.

ಎಚ್‌ಎಂಟಿ ಕೇವಲ ಒಂದು ವಾಚ್ ಬ್ರ್ಯಾಂಡ್ ಅಲ್ಲ. ಅದು ಕನ್ನಡಿಗರ ಸ್ವದೇಶಿ ಹೆಮ್ಮೆ ಹಾಗೂ ಕರ್ನಾಟಕದ ಕೈಗಾರಿಕಾ ಪರಂಪರೆಯ ಪ್ರತೀಕವಾಗಿದೆ. ಸಮಯಪಾಲನೆ ಮತ್ತು ಶಿಸ್ತಿಗೆ ಹೆಸರಾದ ಶಿಕ್ಷಕರಿಗೆ ಇಂತಹ ಉಡುಗೊರೆ ನೀಡುವುದು ಅರ್ಥಪೂರ್ಣವಾಗಿದೆ ಎಂದು ಸಚಿವ ಪ್ರಲ್ಹಾದ ಜೋಶಿ ಹೇಳಿದರು.

'ವೋಕಲ್ ಫಾರ್ ಲೋಕಲ್' ಹಾಗೂ 'ಆತ್ಮನಿರ್ಭರ ಭಾರತ'ದ ಆಶಯಕ್ಕೆ ಪೂರಕವಾಗಿ ದೇಶೀಯ ಉತ್ಪನ್ನಗಳನ್ನು ಪ್ರೋತ್ಸಾಹಿಸುವ ಸಂದೇಶವನ್ನು ಈ ಮೂಲಕ ಸಾರಲಾಗಿದೆ. ವಿದ್ಯಾರ್ಥಿಗಳ ಭವಿಷ್ಯ ರೂಪಿಸುವಲ್ಲಿ ಶಿಕ್ಷಕರ ಪಾತ್ರ ಅತ್ಯಂತ ಮಹತ್ವದ್ದಾಗಿದ್ದು, ರಾಷ್ಟ್ರ ನಿರ್ಮಾಣದಲ್ಲಿ ಅವರ ಸೇವೆ ಅವಿಸ್ಮರಣೀಯ ಎಂದು ಅವರು ತಿಳಿಸಿದರು.

ಈ ಬಾರಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ 48 ಶಿಕ್ಷಕರು, ಉನ್ನತ ಶಿಕ್ಷಣ ಸಂಸ್ಥೆಗಳು ಹಾಗೂ ಪಾಲಿಟೆಕ್ನಿಕ್‌ಗಳ 21 ಶಿಕ್ಷಕರು ಮತ್ತು ಅಧ್ಯಾಪಕರು ಹಾಗೂ ಕೌಶಲ್ಯ ಅಭಿವೃದ್ಧಿ ಮತ್ತು ಉದ್ಯಮಶೀಲತೆ ಸಚಿವಾಲಯದ 13 ಕೌಶಲ್ಯ ತರಬೇತುದಾರರು ಸೇರಿದಂತೆ ಒಟ್ಟು 82 ಮಂದಿಗೆ ರಾಷ್ಟ್ರೀಯ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಪ್ರಶಸ್ತಿ ಪುರಸ್ಕೃತರು ತಮ್ಮ ಬೋಧನಾ ಅನುಭವ, ನವೀನ ಪ್ರಯೋಗಗಳು ಹಾಗೂ ಸೃಜನಶೀಲ ಕಲಿಕಾ ವಿಧಾನಗಳನ್ನು ಹಂಚಿಕೊಂಡರು.

# ಬಳ್ಳಾರಿ ಚಲೋ ಜನಾಂದೋಲನವಾಗುತ್ತಿದೆ: ವಿಜಯೇಂದ್ರ

# ಗ್ಯಾರಂಟಿ ಹೆಸರಿನಲ್ಲಿ ಜನರಿಗೆ ಅನ್ಯಾಯ ಆರೋಪ

● ವಿಕ್ರಮ ವಾಹಿನಿ | ಕಾರಟಗಿ

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ನೇತೃತ್ವದ 'ಬಳ್ಳಾರಿ ಚಲೋ' ಪಾದಯಾತ್ರೆ ಐದನೇ ದಿನಕ್ಕೆ ಕಾಲಿಟ್ಟಿದ್ದು, ದಿನದಿಂದ ದಿನಕ್ಕೆ ಜನಾಂದೋಲನವಾಗಿ ರೂಪುಗೊಳ್ಳುತ್ತಿದೆ ಎಂದು ವಿಜಯೇಂದ್ರ ಹೇಳಿದರು.

ಕಾರಟಗಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪಾದಯಾತ್ರೆಗೆ ದೊರೆಯುತ್ತಿರುವ ಜನಬೆಂಬಲದಿಂದ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹತಾಶರಾಗಿದ್ದಾರೆ ಎಂದು ಟೀಕಿಸಿದರು. ನಮ್ಮ ಹೋರಾಟದ ಪರಿಣಾಮವಾಗಿಯೇ ಮುಖ್ಯಮಂತ್ರಿ ಬರಪೀಡಿತ ಪ್ರದೇಶಗಳ ಪರಿಶೀಲನೆಗಿಳಿ ಮುಂದಾಗಿದ್ದು, ಹಸಿರು ಶಾಲು ಧರಿಸಿ ಉತ್ತರ ಕರ್ನಾಟಕಕ್ಕೆ ಭೇಟಿ ನೀಡಿದ್ದಾರೆ ಎಂದು ಹೇಳಿದರು.

ಕಾಂಗ್ರೆಸ್ ಸರ್ಕಾರ ಜನಪ್ರಿಯ ಸರ್ಕಾರವಲ್ಲ, ಜಾಹೀರಾತು ಸರ್ಕಾರ. ಗೃಹಲಕ್ಷ್ಮಿ ಯೋಜನೆಯ 5,000 ಕೋಟಿ ಅಕ್ರಮದ ಆರೋಪದ ಬಗ್ಗೆ ಸರ್ಕಾರ ಸ್ಪಷ್ಟನೆ ನೀಡಿಲ್ಲ. ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಗಳು ಏನು ಮಾಡುತ್ತಿವೆ ಎಂದು ಪ್ರಶ್ನಿಸಿದರು.

ಗ್ರಾಮೀಣ ಭಾಗದಲ್ಲಿ ಬಸ್‌ಗಳ ಕೊರತೆಯಿಂದ ವಿದ್ಯಾರ್ಥಿನಿಯರು ತೊಂದರೆ ಅನುಭವಿಸುತ್ತಿದ್ದಾರೆ. ಶಾಲೆಗಳಿದ್ದರೂ ಶಿಕ್ಷಕರಿಲ್ಲ, ಆಸ್ಪತ್ರೆಗಳಿದ್ದರೂ ವೈದ್ಯರಿಲ್ಲ. ಉತ್ತರ ಕರ್ನಾಟಕಕ್ಕೆ ಕೈಗಾರಿಕೆ, ಉದ್ಯೋಗಾವಕಾಶ ಕಲ್ಪಿಸುವಲ್ಲಿ ಸರ್ಕಾರ ವಿಫಲವಾಗಿದೆ ಎಂದು ಆರೋಪಿಸಿದರು.

ಗ್ಯಾರಂಟಿಗಳಿಗೆ ಹಣ ಹೊಂದಿಸಲು ಮದ್ಯದ ಅಂಗಡಿಗಳ ಸಂಖ್ಯೆ ಹೆಚ್ಚಿಸಿ ರಾಜ್ಯವನ್ನು 'ಕುಡುಕರ ರಾಜ್ಯ'ವನ್ನಾಗಿ ಮಾಡಲಾಗಿದೆ. ಎಸ್‌ಸಿಎಸ್‌ಪಿ–ಟಿಎಸ್‌ಪಿ ಅನುದಾನವನ್ನು ಗ್ಯಾರಂಟಿಗಳಿಗೆ ಬಳಸಲಾಗುತ್ತಿದೆ. ಬಿಪಿಎಲ್ ಕಾರ್ಡ್ ಕಡಿತದ ಮೂಲಕ ಬಡವರಿಗೆ ಅನ್ಯಾಯ ಮಾಡಲಾಗುತ್ತಿದೆ ಎಂದರು.

ರಾಜ್ಯದಲ್ಲಿ ಬರ ಪರಿಸ್ಥಿತಿ ಇರುವುದರಿಂದ ರೈತರ ನೆರವಿಗೆ ಸರ್ಕಾರ ತಕ್ಷಣ ಮುಂದಾಗಬೇಕು. ಸಹಕಾರ ಸಂಘಗಳಲ್ಲಿನ ರೈತರ ಸಾಲಮನ್ನಾ ಮಾಡಬೇಕು ಎಂದು ಆಗ್ರಹಿಸಿದರು.

ಪ್ರಧಾನಮಂತ್ರಿ ಸ್ವನಿಧಿ ಯೋಜನೆಯಡಿ ಬದುಕು ಕಟ್ಟಿಕೊಂಡಿರುವ ಬೀದಿ ಬದಿ ವ್ಯಾಪಾರಿಗಳನ್ನು ಪರ್ಯಾಯ ವ್ಯವಸ್ಥೆ ಇಲ್ಲದೆ ತೆರವುಗೊಳಿಸಬಾರದು. ಬೆಂಗಳೂರಿನ ನಿಂಗಮ್ಮ ಅವರ ಇಡ್ಲಿ ಅಂಗಡಿ ತೆರವು ಕ್ರಮ ಖಂಡನೀಯ. ಮೊದಲು ವ್ಯಾಪಾರಿಗಳಿಗೆ ಪರ್ಯಾಯ ವ್ಯವಸ್ಥೆ ಕಲ್ಪಿಸಬೇಕು ಎಂದು ವಿಜಯೇಂದ್ರ ಒತ್ತಾಯಿಸಿದರು.



## 'ನವಲಿ ಜಲಾಶಯಕ್ಕೆ ಅನುದಾನ ನೀಡಿ'

● ವಿಕ್ರಮ ವಾಹಿನಿ | ಗಂಗಾವತಿ

ತುಂಗಭದ್ರಾ ಜಲಾಶಯದಲ್ಲಿ ಸುಮಾರು 34 ಟಿಎಂಸಿ ಹೂಳು ತುಂಬಿಕೊಂಡಿರುವುದರಿಂದ ನೀರು ಸಂಗ್ರಹ ಸಾಮರ್ಥ್ಯ ಕಡಿಮೆಯಾಗಿದೆ. ಹೀಗಾಗಿ ರೈತರ ಹಿತದೃಷ್ಟಿಯಿಂದ ನವಲಿ ಸಮಾನಾಂತರ ಜಲಾಶಯ ನಿರ್ಮಾಣಕ್ಕೆ ಸರ್ಕಾರ ಬಜೆಟ್‌ನಲ್ಲಿ ಅನುದಾನ ಮೀಸಲಿಟ್ಟು ಯೋಜನೆಯನ್ನು ಶೀಘ್ರ ಕಾರ್ಯರೂಪಕ್ಕೆ ತರಬೇಕು ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಒತ್ತಾಯಿಸಿದರು.

ಬಳ್ಳಾರಿ ಚಲೋ ಪಾದಯಾತ್ರೆಯ ಐದನೇ ದಿನ ನವಲಿ ಜಲಾಶಯ ವ್ಯಾಪ್ತಿಯ ರೈತರೊಂದಿಗೆ ಸಂವಾದ ನಡೆಸಿ ಮಾತನಾಡಿದ ಅವರು, ನವಲಿ ಜಲಾಶಯ ನಿರ್ಮಾಣದ ಕುರಿತು ಈ ಹಿಂದೆ ಬಿ.ಎಸ್.ಯಡಿಯೂರಪ್ಪ ಅವರು ಚಿಂತನೆ ನಡೆಸಿದ್ದರು. ಆದರೆ ನಂತರ ಯೋಜನೆಗೆ ಯಾವುದೇ ಮಹತ್ವದ ಕ್ರಮ ಕೈಗೊಳ್ಳಲಾಗಿಲ್ಲ ಎಂದರು. ತುಂಗಭದ್ರಾ ಜಲಾಶಯದ ಕ್ರಸ್ಟ್ ಗೇಟ್ ಕೊಚ್ಚಿಹೋದ ಸಂದರ್ಭದಲ್ಲಿ ಅಪಾರ ಪ್ರಮಾಣದ ನೀರು



ಪೋಲಾಗಿತ್ತು. ಇಂತಹ ಪರಿಸ್ಥಿತಿಯಲ್ಲಿ ಪರ್ಯಾಯ ಜಲಾಶಯವಿದ್ದರೆ ರೈತರಿಗೆ ಅನುಕೂಲವಾಗಲಿದೆ. ನವಲಿ ಯೋಜನೆ ಅಥವಾ ಜಲಾಶಯದಲ್ಲಿನ ಹೂಳು ತೆರವು–ಯಾವುದು ಪರಿಣಾಮಕಾರಿ ಎಂಬುದನ್ನು ವೈಜ್ಞಾನಿಕವಾಗಿ ಅಧ್ಯಯನ ನಡೆಸಿ ನಿರ್ಧರಿಸಬೇಕು ಎಂದು ಹೇಳಿದರು. ಯೋಜನೆ ಕುರಿತು ರಾಜಕೀಯ ಮಾಡದೆ ರೈತರ ಹಿತವನ್ನು ಗಮನದಲ್ಲಿಟ್ಟುಕೊಳ್ಳಬೇಕು.

## ಮನುಷ್ಯತ್ವ ಇಲ್ಲದ ಸರಕಾರ ಕಾಂಗ್ರೆಸ್ಸಿನದು: ವಿಜಯೇಂದ್ರ ಟೀಕೆ

● ವಿಕ್ರಮ ವಾಹಿನಿ | ಗಂಗಾವತಿ

ಬಡವರ, ರೈತರ ಪರವಾಗಿ ಕಿಂಚಿತ್ತೂ ಕಾಳಜಿ, ಕನಿಕರ ಇಲ್ಲದ ಮನುಷ್ಯತ್ವ ಇಲ್ಲದ ಸರಕಾರ ಕಾಂಗ್ರೆಸ್ಸಿನದು ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರು ಹೇಳಿದ್ದಾರೆ.

5ನೇ ದಿನದ ಬಳ್ಳಾರಿ ಚಲೋ ಪಾದಯಾತ್ರೆಯನ್ನುದ್ದೇಶಿಸಿ ಮಾತನಾಡಿದ ಅವರು, ದೊಡ್ಡ ಸಂಖ್ಯೆಯಲ್ಲಿ ಸೇರಿದ ಜನರನ್ನು ಮತ್ತು ಕಾರ್ಯಕರ್ತರನ್ನು ಅಭಿನಂದಿಸಿದರು. ಕುಂಭಕರ್ಣ ನಿದ್ರೆಯಲ್ಲಿರುವ ಸರಕಾರವನ್ನು ಬಡಿದೆಬ್ಬಿಸಬೇಕೆಂದು ಪಾದಯಾತ್ರೆ ಹೊರಟಿದ್ದೇವೆ. ಭೀಕರ ಬರಗಾಲವಿದ್ದರೂ ಇವರು ಕೈಕಟ್ಟಿ ಕುಳಿತಿದ್ದಾರೆ ಎಂದು ಟೀಕಿಸಿದರು.

ಮುಖ್ಯಮಂತ್ರಿಗಳಾಗಿ 3 ತಿಂಗಳಾದರೂ ಉತ್ತರ ಕರ್ನಾಟಕದ ಜನರ ಸಮಸ್ಯೆ ಆಲಿಸುವ ಇಚ್ಛಾಶಕ್ತಿಯ ಕೊರತೆ ಎದ್ದು ಕಾಣುತ್ತಿದೆ ಎಂದು ಆಕ್ಷೇಪ ವ್ಯಕ್ತಪಡಿಸಿದರು. ನಮ್ಮ ಪಾದಯಾತ್ರೆ ಪ್ರಾರಂಭದ ಘೋಷಣೆ ಮಾಡಿದ ತಕ್ಷಣ ವಾಲ್ಮೀಕಿ ನಿಗಮದ ಭ್ರಷ್ಟಾಚಾರದ ಕಳಂಕ ಹೊತ್ತ ಸಚಿವರನ್ನು ಕೈಬಿಡಲಾಗಿದೆ. 190ಕ್ಕೂ ಹೆಚ್ಚು ತಾಲ್ಲೂಕು ಬರಪೀಡಿತ ಇದ್ದವು. 101 ತಾಲ್ಲೂಕು ಬರಪೀಡಿತ ಎಂದು ಘೋಷಿಸಿದ್ದರು. ನಾನು ಮುಖ್ಯಮಂತ್ರಿಗಳಿಗೆ ಎಚ್ಚರಿಕೆ ಕೊಟ್ಟ ಬಳಿಕ ಲಿಂಗಸುಗೂರು ಸೇರಿ 25 ತಾಲ್ಲೂಕುಗಳನ್ನು ಬರಪೀಡಿತ ಎಂದು ಪ್ರಕಟಿಸಿದ್ದಾರೆ ಎಂದು ಗಮನ ಸೆಳೆದರು.

ನಿಮ್ಮೆಲ್ಲರ ಸಹಕಾರದಿಂದ ನಮ್ಮ ಹೋರಾಟ ಯಶಸ್ಸು ಪಡೆದಿದೆ. ಮುಖ್ಯಮಂತ್ರಿಗಳು ಬರಗಾಲದ ವೈಮಾನಿಕ ಸಮೀಕ್ಷೆ ಮಾಡುತ್ತಿದ್ದಾರೆ. ನಿನ್ನೆ ದೊಡ್ಡ ಮನಸ್ಸು ಮಾಡಿ ಕೂಡ್ಲಿಗಿಗೆ ಬಂದಿಳಿದಿದ್ದಾರೆ. ರೈತರ ಸಂಕಷ್ಟಕ್ಕೆ ಸ್ಪಂದಿಸಲು ಅಧಿವೇಶನ ಕರೆಯಲು ಆಗ್ರಹಿಸಿದ್ದೆ. ನಮ್ಮ ಆಗ್ರಹಕ್ಕೆ ಮಣಿದು ಇದೇ 21ರಿಂದ ವಿಶೇಷ ಅಧಿವೇಶನ ಕರೆದಿದ್ದಾರೆ ಎಂದು ವಿವರಿಸಿದರು.

ನವಲಿ ಸಮಾನಾಂತರ ಜಲಾಶಯಕ್ಕೆ ವಿಶೇಷ ಅನುದಾನ ಕೊಡುವಂತೆ ಹೋರಾಟ ಮಾಡುತ್ತೇವೆ. ನಿಮ್ಮೆಲ್ಲರ ಧ್ವನಿಯಾಗಿ ಸದನದ ಒಳಗೆ, ಸದನದ ಹೊರಗೆ ಉತ್ತರ ಕರ್ನಾಟಕದ ಸಮಸ್ಯೆಗಳ ಕುರಿತು ಹೋರಾಡುತ್ತೇವೆ. ನಿಮ್ಮ ಬೆಂಬಲವೇ ನಮಗೆ ಆಶೀರ್ವಾದ ಎಂದು ಹೇಳಿದರು.

# "ಶಿಕ್ಷಕರಿಂದ ಮಕ್ಕಳ ಉಜ್ವಲ ಭವಿಷ್ಯ ರೂಪಿಸುವ ಮಹತ್ತರ ಕಾರ್ಯ"

● ವಿಕ್ರಮ ವಾಹಿನಿ | ಕಾರಟಗಿ

ಶಿಕ್ಷಣ ತಜ್ಞ, ರಾಷ್ಟ್ರಪತಿಗಳಾದರೂ ದೇಶಸೇವೆ ಮಾಡಿದ ಡಾ.ಸರ್ವಪಲ್ಲಿ ರಾಧಾಕೃಷ್ಣನ್ ಅವರ ಜನ್ಮದಿನದ ಅಂಗವಾಗಿ ಶಿಕ್ಷಕರ ದಿನವನ್ನು ಅರ್ಥಪೂರ್ಣವಾಗಿ, ಅದ್ದೂರಿಯಾಗಿ ಆಚರಿಸಲಾಗುತ್ತದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರು ತಿಳಿಸಿದರು.

5ನೇ ದಿನದ ಬಳ್ಳಾರಿ ಚಲೋ ಪಾದಯಾತ್ರೆಯು ಬೆಳಿಗ್ಗೆ ಕಾರಟಗಿಯಲ್ಲಿ ಆರಂಭಗೊಂಡಿತು. ಇದೇವೇಳೆ ನಿವೃತ್ತ ಶಿಕ್ಷಕರನ್ನು ಸನ್ಮಾನಿಸಿ ಮಾತನಾಡಿದ ಅವರು, ಶಿಕ್ಷಕರೆಂದರೆ ಕೇವಲ ಪಾಠ ಹೇಳಿ ಕೊಡುವವರಲ್ಲ; ಮಕ್ಕಳ ಉಜ್ವಲ ಭವಿಷ್ಯ ರೂಪಿಸುವ ಮಹತ್ತರ ಕಾರ್ಯವನ್ನು ಅವರು ನಿರ್ವಹಿಸುತ್ತಾರೆ ಎಂದು ವಿಶ್ಲೇಷಿಸಿದರು.

ಮಕ್ಕಳ ವ್ಯಕ್ತಿತ್ವ ನಿರ್ಮಿಸುವಲ್ಲಿ ಅವರ ಪಾತ್ರ ಗಮನಾರ್ಹವಾದುದು. ಒಬ್ಬ ಒಳ್ಳೆಯ ಶಿಕ್ಷಕ ಒಂದು ಪೀಳಿಗೆಯನ್ನೇ ಬದಲಾಯಿಸಬಲ್ಲ ಎಂದು ತಿಳಿಸಿದರು. ಪ್ರಧಾನಮಂತ್ರಿ ನರೇಂದ್ರ ಮೋದಿಜೀ ಅವರು 2047ರಲ್ಲಿ ವಿಕಸಿತ ಭಾರತ ನಿರ್ಮಾಣಕ್ಕೆ ಯುವಶಕ್ತಿಯನ್ನು ಸರಿದಾರಿಯಲ್ಲಿ ಒಯ್ಯಬಲ್ಲ ಮಹತ್ವದ ಕಾರ್ಯವನ್ನು ಶಿಕ್ಷಕರು ಮಾಡುತ್ತಾರೆ ಎಂದು



ಹೇಳಿದ್ದಾಗಿ ತಿಳಿಸಿದರು.

ಮಕ್ಕಳಲ್ಲಿ ಶಿಸ್ತು, ಸಂಸ್ಕಾರ, ದೇಶಪ್ರೇಮ ಹಾಗೂ ಉತ್ತಮ ಮೌಲ್ಯಗಳನ್ನು ಬೆಳೆಸುವಲ್ಲಿ ಶಿಕ್ಷಕರ ಪಾತ್ರ ಅತ್ಯಂತ ಮಹತ್ವದ್ದು. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು 2047ರ ವೇಳೆಗೆ ವಿಕಸಿತ ಭಾರತ ನಿರ್ಮಿಸುವ ಸಂಕಲ್ಪ ಹೊಂದಿದ್ದು, ಯುವಶಕ್ತಿಯನ್ನು ಸರಿದಾರಿಯಲ್ಲಿ ಮುನ್ನಡೆಸುವಲ್ಲಿ ಶಿಕ್ಷಕರು ಪ್ರಮುಖ ಪಾತ್ರ ವಹಿಸಲಿದ್ದಾರೆ ಎಂದು ವಿಜಯೇಂದ್ರ ಹೇಳಿದರು.

ಶಿಕ್ಷಕರು ಯಾವುದೇ ಪ್ರತಿಫಲದ ನಿರೀಕ್ಷೆಯಿಲ್ಲದೆ ರಾಷ್ಟ್ರ ನಿರ್ಮಾಣದ ಕಾರ್ಯವನ್ನು ಮೌನವಾಗಿ ನಿರ್ವಹಿಸುತ್ತಿದ್ದಾರೆ. ಅವರ ಸೇವೆಯನ್ನು ಗುರುತಿಸಿ ಗೌರವಿಸುವುದು ಸಮಾಜದ ಹಾಗೂ ಪ್ರತಿಯೊಬ್ಬರ ಕರ್ತವ್ಯವಾಗಿದೆ. ಶಿಕ್ಷಕರ ಸಮಸ್ಯೆಗಳಿಗೆ ಸ್ಪಂದಿಸುವ ಜೊತೆಗೆ ಶಿಕ್ಷಣ ಕ್ಷೇತ್ರದ ಗುಣಮಟ್ಟ ಸುಧಾರಣೆಗೆ ಆದ್ಯತೆ ನೀಡಬೇಕಿದೆ ಎಂದರು.

ರಾಜ್ಯದ ಗ್ರಾಮೀಣ ಭಾಗಗಳಲ್ಲಿ ಶಿಕ್ಷಕರ ಕೊರತೆ ಸೇರಿದಂತೆ ಹಲವು ಸಮಸ್ಯೆಗಳಿವೆ. ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ದೊರೆಯಲು ಅಗತ್ಯ ಮೂಲಸೌಕರ್ಯ ಕಲ್ಪಿಸುವುದು ಹಾಗೂ ಖಾಲಿ ಹುದ್ದೆಗಳನ್ನು ಭರ್ತಿ ಮಾಡುವುದು ಸರ್ಕಾರದ ಆದ್ಯತೆಯಾಗಬೇಕು ಎಂದು ಅವರು ಹೇಳಿದರು.

ಶಿಕ್ಷಕರು ರಾಷ್ಟ್ರ ನಿರ್ಮಾಣ ಕಾರ್ಯವನ್ನು ಮೌನವಾಗಿ ನೆರವೇರಿಸುತ್ತಾರೆ. ಆದ್ದರಿಂದ ಅವರನ್ನು ಗೌರವಿಸುವ ಕಾರ್ಯ ಸಮಾಜದಿಂದ– ನಮ್ಮಿಂದ ಆಗಬೇಕು ಎಂದು ಹೇಳಿದರು. ಮಾಜಿ ಸಚಿವ ಬಿ.ಶ್ರೀರಾಮುಲು, ಪ್ರಮುಖರು ಇದ್ದರು.



ಅಮೆರಿಕದಲ್ಲಿ ನಡೆಯುತ್ತಿರುವ ಮೂರು ದಿನಗಳ '25ನೇ ಅಕ್ಕ ವಿಶ್ವಕನ್ನಡ ಸಮ್ಮೇಳನ'ವನ್ನು ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನದ ಪೀಠಾಧ್ಯಕ್ಷರಾದ ಶ್ರೀಶ್ರೀಶ್ರೀ ಡಾ. ನಿರ್ಮಲಾನಂದನಾಥ ಮಹಾಸ್ವಾಮೀಜಿಗಳ ದಿವ್ಯ ಸಾನಿಧ್ಯದಲ್ಲಿ ಉದ್ಘಾಟಿಸಲಾಯಿತು. ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ, 'ಅಕ್ಕ' ಅಧ್ಯಕ್ಷ ಮಧು ರಂಗಯ್ಯ ಸೇರಿದಂತೆ ಅನಿವಾಸಿ ಕನ್ನಡಿಗರು, ಕಲಾವಿದರು, ಕನ್ನಡಾಸಕ್ತರು ಹಾಗೂ ವಿವಿಧ ಕ್ಷೇತ್ರಗಳ ಗಣ್ಯರು ಉಪಸ್ಥಿತರಿದ್ದರು.

## ಬೆಂಗಳೂರಿನಲ್ಲಿ ಪ್ರತ್ಯೇಕ ಎಐ ವಿಶ್ವವಿದ್ಯಾಲಯ: ರಾಯರೆಡ್ಡಿ

● ವಿಕ್ರಮ ವಾಹಿನಿ | ಬೆಂಗಳೂರು

ರಾಜ್ಯದಲ್ಲಿ ಉನ್ನತ ಶಿಕ್ಷಣ, ಕೌಶಲ್ಯಾಭಿವೃದ್ಧಿ ಹಾಗೂ ಉದ್ಯೋಗ ಸೃಷ್ಟಿಗೆ ಹೆಚ್ಚಿನ ಆದ್ಯತೆ ನೀಡಲಾಗುತ್ತಿದ್ದು, ಬೆಂಗಳೂರಿನಲ್ಲಿ ಪ್ರತ್ಯೇಕ ಕೃತಕ ಬುದ್ಧಿಮತ್ತೆ (ಎಐ) ವಿಶ್ವವಿದ್ಯಾಲಯ ಸ್ಥಾಪಿಸುವ ಕುರಿತು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಚಿಂತನೆ ನಡೆಸಿದ್ದಾರೆ ಎಂದು ಉನ್ನತ ಶಿಕ್ಷಣ ಸಚಿವ ಬಸವರಾಜ ರಾಯರೆಡ್ಡಿ ತಿಳಿಸಿದ್ದಾರೆ.

ರಾಜ್ಯ ಸರ್ಕಾರ ಶಿಕ್ಷಣ ಕ್ಷೇತ್ರಕ್ಕೆ ಹೆಚ್ಚಿನ ಒತ್ತು ನೀಡಿದ್ದು, ಈ ಬಾರಿಯ ಬಜೆಟ್‌ನಲ್ಲಿ ಶಿಕ್ಷಣ ಇಲಾಖೆಗೆ 55,000 ಕೋಟಿ ಅನುದಾನ ಮೀಸಲಿಡಲಾಗಿದೆ. ಬ್ಯಾಂಕ್‌ಗಳ ನೆರವಿನಿಂದ 2,500 ಕೋಟಿ ಪಡೆದು ರಾಜ್ಯಾದ್ಯಂತ 807 ಕರ್ನಾಟಕ ಪಬ್ಲಿಕ್ ಶಾಲೆಗಳನ್ನು ಆರಂಭಿಸಲಾಗಿದೆ ಎಂದು ಅವರು ಹೇಳಿದರು.

ರಾಜ್ಯದ ಸುಮಾರು 6.90 ಕೋಟಿ ಜನಸಂಖ್ಯೆಯಲ್ಲಿ 1.32 ಕೋಟಿ ವಿದ್ಯಾರ್ಥಿಗಳು ಶಾಲಾ–ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ. ಯುವಜನರಿಗೆ ಗುಣಮಟ್ಟದ ಉನ್ನತ ಶಿಕ್ಷಣದ ಜೊತೆಗೆ ಉದ್ಯೋಗಾವಕಾಶ ಕಲ್ಪಿಸುವುದು ಸರ್ಕಾರದ ಪ್ರಮುಖ ಗುರಿಯಾಗಿದೆ ಎಂದರು. ಬೆಂಗಳೂರು ದೇಶದ ಪ್ರಮುಖ ತಂತ್ರಜ್ಞಾನ ನಗರವಾಗಿದ್ದು, ಎಐ ಕ್ಷೇತ್ರದಲ್ಲಿ ಭವಿಷ್ಯದಲ್ಲಿ ಹೆಚ್ಚಿನ ಉದ್ಯೋಗಾವಕಾಶಗಳು ಸೃಷ್ಟಿಯಾಗಲಿವೆ. ಈ ಹಿನ್ನೆಲೆಯಲ್ಲಿ ಎಐಗೆ ಸಂಬಂಧಿಸಿದ ವಿಶೇಷ ಶಿಕ್ಷಣ ಮತ್ತು ಕೌಶಲ್ಯ ತರಬೇತಿ ನೀಡಲು ಪ್ರತ್ಯೇಕ ವಿಶ್ವವಿದ್ಯಾಲಯ ಸ್ಥಾಪಿಸುವ ಅಗತ್ಯವಿದೆ ಎಂದು ರಾಯರೆಡ್ಡಿ ಹೇಳಿದರು.

## ಕೃಷಿ ಭೂಮಿ, ಜನವಸತಿ ಪ್ರದೇಶಗಳನ್ನು ಪರಿಸರ ಸೂಕ್ಷ್ಮ ವಲಯದಿಂದ ಕೈಬಿಡಿ: ರವಿಕುಮಾರ್

● ವಿಕ್ರಮ ವಾಹಿನಿ | ಬೆಂಗಳೂರು

ಪಶ್ಚಿಮ ಘಟ್ಟಗಳ ಸಂರಕ್ಷಣೆ ಹೆಸರಿನಲ್ಲಿ ಮಲೆನಾಡು ಮತ್ತು ಕರಾವಳಿ ಭಾಗದ ರೈತರು, ಗಿರಿಜನರು ಹಾಗೂ ಸಣ್ಣ ಬೆಳೆಗಾರರ ಬದುಕಿಗೆ ತೊಂದರೆಯಾಗುವ ಕಸ್ತೂರಿರಂಗನ್ ವರದಿಯ ಪ್ರಸ್ತುತ ಸ್ವರೂಪವನ್ನು ಬಿಜೆಪಿ ತೀವ್ರವಾಗಿ ವಿರೋಧಿಸಲಿದೆ ಎಂದು ವಿಧಾನ ಪರಿಷತ್ತಿನ ವಿರೋಧ ಪಕ್ಷದ ಮುಖ್ಯ ಸಚೇತಕ ಎನ್. ರವಿಕುಮಾರ್ ತಿಳಿಸಿದ್ದಾರೆ.



ಈ ಕುರಿತು ಮಾಧ್ಯಮ ಪ್ರಕಟಣೆ ಬಿಡುಗಡೆ ಮಾಡಿರುವ ಅವರು, ರಾಜ್ಯ ಸರ್ಕಾರ ಕರೆದಿರುವ ವಿಶೇಷ ಅಧಿವೇಶನದಲ್ಲಿ ರೈತರ ಪರವಾಗಿ ಗಟ್ಟಿಯಾಗಿ ಧ್ವನಿ ಎತ್ತಲಾಗುವುದು ಎಂದಿದ್ದಾರೆ.

ಕಸ್ತೂರಿರಂಗನ್ ವರದಿ ಕೇವಲ ಉಪಗ್ರಹ ಚಿತ್ರಗಳ ಆಧಾರದ ಮೇಲೆ ರೂಪುಗೊಂಡಿದ್ದು, ಮಲೆನಾಡಿನ ಅಡಿಕೆ, ಕಾಫಿ, ರಬ್ಬರ್ ಹಾಗೂ ಕಾಳುಮೆಣಸಿನ ತೋಟಗಳನ್ನು ಅರಣ್ಯ ಪ್ರದೇಶವೆಂದು ಪರಿಗಣಿಸಿರುವ ಸಾಧ್ಯತೆಯಿದೆ. ಶತಮಾನಗಳಿಂದ ಕೃಷಿ ಮಾಡುತ್ತಿರುವ ರೈತರ ತೋಟಗಳನ್ನೇ ಪರಿಸರ ಸೂಕ್ಷ್ಮ ವಲಯಕ್ಕೆ ಸೇರಿಸುವುದು ಅನ್ಯಾಯ ಎಂದು ಅವರು ಹೇಳಿದ್ದಾರೆ.

ವರದಿ ಜಾರಿಯಾದರೆ ರಾಜ್ಯದ 10 ಜಿಲ್ಲೆಗಳ 33 ತಾಲೂಕುಗಳ 1,576 ಗ್ರಾಮಗಳು ಹಾಗೂ 20,668 ಚದರ ಕಿ.ಮೀ. ಪ್ರದೇಶ ಪರಿಸರ ಸೂಕ್ಷ್ಮ ವಲಯದ ವ್ಯಾಪ್ತಿಗೆ ಬರಲಿದೆ. ರಾಜ್ಯದ ಶೇ.70ರಷ್ಟು ಕಾಫಿ ಮತ್ತು ಶೇ.60ರಷ್ಟು ಅಡಿಕೆ ಉತ್ಪಾದನೆಯಾಗುವ ಪ್ರದೇಶಗಳ ಮೇಲೆ ಇದು ಪರಿಣಾಮ ಬೀರಲಿದೆ ಎಂದು ಅವರು ತಿಳಿಸಿದ್ದಾರೆ.

ಕೃಷಿ ವಿಸ್ತರಣೆ, ಜಮೀನು ಅಭಿವೃದ್ಧಿ, ತಡೆಗೋಡೆ ನಿರ್ಮಾಣ ಸೇರಿದಂತೆ ಮನೆಗಳ ದುರಸ್ತಿಗೂ ಅನುಮತಿ ಪಡೆಯಬೇಕಾದ ಪರಿಸ್ಥಿತಿ ಎದುರಾಗಬಹುದು.

ಸರ್ಕಾರಕ್ಕೆ ನಾಲ್ಕು ಪ್ರಮುಖ ಬೇಡಿಕೆಗಳನ್ನು ಮುಂದಿಟ್ಟಿರುವ ಅವರು, ಉಪಗ್ರಹ ಸಮೀಕ್ಷೆಯ ಬದಲಾಗಿ ಕಂದಾಯ ಮತ್ತು ಅರಣ್ಯ ಇಲಾಖೆಗಳು ಜಂಟಿಯಾಗಿ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಭೌತಿಕ ಮರುಸಮೀಕ್ಷೆ ನಡೆಸಬೇಕು. ರೈತರ ಕೃಷಿ ಭೂಮಿ, ತೋಟಗಳು, ಕಂದಾಯ ಭೂಮಿ ಹಾಗೂ ಜನವಸತಿ ಪ್ರದೇಶಗಳನ್ನು ಪರಿಸರ ಸೂಕ್ಷ್ಮ ವಲಯದಿಂದ ಸಂಪೂರ್ಣ ಹೊರಗಿಡಬೇಕು.

"ಪರಿಸರ ಸಂರಕ್ಷಣೆ ಮುಖ್ಯ. ಆದರೆ ರೈತರ ಬದುಕನ್ನು ಬಲಿಕೊಟ್ಟು ಪರಿಸರ ರಕ್ಷಣೆ ಮಾಡಲು ಸಾಧ್ಯವಿಲ್ಲ. ಪರಿಸರ ಮತ್ತು ಅಭಿವೃದ್ಧಿಯ ನಡುವೆ ಸಮತೋಲನ ಕಾಯ್ದುಕೊಳ್ಳಬೇಕು. ಸರ್ಕಾರ ರೈತರ ಪರ ಗಟ್ಟಿಯಾದ ನಿಲುವು ತಳೆಯದಿದ್ದರೆ ಉಗ್ರ ಹೋರಾಟ ನಡೆಸಲಾಗುವುದು" ಎಂದು ರವಿಕುಮಾರ್ ಎಚ್ಚರಿಸಿದ್ದಾರೆ.

## ಶ್ರೀಕೃಷ್ಣ ಜನ್ಮಾಷ್ಟಮಿ ಪ್ರಯುಕ್ತ 60 ವಿದ್ಯಾರ್ಥಿಗಳಿಂದ ಭರತನಾಟ್ಯ ವೈಭವ

● ವಿಕ್ರಮ ವಾಹಿನಿ | ಬೆಂಗಳೂರು

ಶ್ರೀಕೃಷ್ಣ ಜನ್ಮಾಷ್ಟಮಿ ಪ್ರಯುಕ್ತ ಆನಂದ ಗೋವಿಂದ ದೇವಸ್ಥಾನ, ದೊಡ್ಡಾಲದಮರ ಸಮೀಪ ಭಕ್ತಿ ಮತ್ತು ಕಲೆಯ ಸಮ್ಮಿಲನದ ಅದ್ಭುತ ನೃತ್ಯ ಕಾರ್ಯಕ್ರಮ ಜರುಗಿತು.

ಅಂಧ್ರಹಳ್ಳಿ, ಡಿ ಗ್ರೂಪ್ ಲೇಔಟ್ ನ ಪ್ರತಿಷ್ಠಿತ ನೃತ್ಯ ಸಂಸ್ಥೆ "ನಾಟ್ಯ ಸನ್ನಿಧಿ" ಯ 60 ಮಂದಿ ವಿದ್ಯಾರ್ಥಿಗಳು ಈ ವಿಶೇಷ ಭರತನಾಟ್ಯ ಪ್ರದರ್ಶನದಲ್ಲಿ ಭಾಗವಹಿಸಿ ನೆರೆದ ಭಕ್ತರ ಮನಸೂರೆಗೊಂಡರು.

ಸಂಸ್ಥೆಯ ಗುರು ಶ್ರೀಮತಿ ಮೋನಿಷಾ ನವೀನ್ ಅವರ ಮಾರ್ಗದರ್ಶನದಲ್ಲಿ ವಿದ್ಯಾರ್ಥಿಗಳು ಶ್ರೀಕೃಷ್ಣನ ಬಾಲಲೀಲೆ ಸಾರುವ ನೃತ್ಯರೂಪಕಗಳನ್ನು ಅತ್ಯಂತ ಭಕ್ತಿಭಾವದಿಂದ ಪ್ರಸ್ತುತಪಡಿಸಿದರು. ಪುಟಾಣಿ ಮಕ್ಕಳಿಂದ ಹಿಡಿದು ಹಿರಿಯ ವಿದ್ಯಾರ್ಥಿಗಳವರೆಗೂ ಎಲ್ಲರ ನೃತ್ಯದಲ್ಲಿ ಲಯ, ಭಾವ, ತಾಳಗಳ ಸಮ್ಮಿಲನ ಎದ್ದು ಕಾಣುತ್ತಿತ್ತು.

ಕೃಷ್ಣನ ಕುರಿತಾದ ದೇವರನಾಮ, ಭಜನೆಗಳಿಗೆ ಹೆಜ್ಜೆ ಹಾಕಿದ ಮಕ್ಕಳ ಪ್ರದರ್ಶನವು ದೇವಸ್ಥಾನಕ್ಕೆ ಆಗಮಿಸಿದ್ದ ನೂರಾರು ಭಕ್ತರಿಗೆ ವಿಶೇಷ ಅನುಭೂತಿ ನೀಡಿತು.

ಈ ಸಂದರ್ಭದಲ್ಲಿ ಮಾತನಾಡಿದ ದೇವಸ್ಥಾನದ ಆಡಳಿತ



ಮಂಡಳಿಯವರು, "ಇಂತಹ ಆಧ್ಯಾತ್ಮಿಕ ಸಂದರ್ಭದಲ್ಲಿ ಮಕ್ಕಳಿಂದ ಇಂತಹ ಭಕ್ತಿಪೂರ್ಣ ನೃತ್ಯ ಪ್ರದರ್ಶನ ನಮ್ಮ ದೇವಸ್ಥಾನದಲ್ಲಿ ನಡೆದಿರುವುದು ಸಂತಸದ ವಿಷಯ. ನಾಟ್ಯ ಸನ್ನಿಧಿ ಸಂಸ್ಥೆಯ ಕಾರ್ಯ ಶ್ಲಾಘನೀಯ" ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಗುರು ಮೋನಿಷಾ ನವೀನ್ ಅವರು ಮಾತನಾಡಿ, "ಕೃಷ್ಣ ಜನ್ಮಾಷ್ಟಮಿಯಂತಹ ಪವಿತ್ರ ದಿನದಂದು ಆನಂದ ಗೋವಿಂದನ ಸನ್ನಿಧಿಯಲ್ಲಿ ನಮ್ಮ ವಿದ್ಯಾರ್ಥಿಗಳಿಗೆ ಪ್ರದರ್ಶನ ನೀಡುವ ಅವಕಾಶ ಸಿಕ್ಕಿರುವುದು ನಮ್ಮ ಭಾಗ್ಯ. ನಮ್ಮ ಸಂಸ್ಥೆಯು ಕೇವಲ ನೃತ್ಯವನ್ನು ಮಾತ್ರವಲ್ಲದೆ ನಮ್ಮ ಸಂಸ್ಕೃತಿ, ಪರಂಪರೆಯನ್ನು ಮುಂದಿನ ಪೀಳಿಗೆಗೆ ತಿಳಿಸುವ ಕೆಲಸ ಮಾಡುತ್ತಿದೆ" ಎಂದರು.

ಕಾರ್ಯಕ್ರಮದ ಕೊನೆಯಲ್ಲಿ ಎಲ್ಲಾ ವಿದ್ಯಾರ್ಥಿಗಳನ್ನು ಮತ್ತು ಗುರುಗಳನ್ನು ದೇವಸ್ಥಾನದ ವತಿಯಿಂದ ಸನ್ಮಾನಿಸಲಾಯಿತು.

www.VIKRAMAVAHINI.com
ಕನ್ನಡ ದಿನಪತ್ರಿಕೆ
PRGI NO: KARKAN/2018/78481

ಸತ್ಯದ ಹಾದಿ । ಜನಪರ ದನಿ । ರಾಷ್ಟ್ರೀಯ ದೃಷ್ಟಿ
ವಿಕ್ರಮ ವಾಹಿನಿ



ಶುಕ್ರವಾರ ವಿಜಯನಗರ ಜಿಲ್ಲೆಯ ಕೂಡ್ಲಿಗಿಯಲ್ಲಿ ಹಮ್ಮಿಕೊಳ್ಳಲಾಗಿರುವ ಪ್ರಜಾಸೇವಾ ಅಭಿಯಾನವನ್ನು ಉದ್ಘಾಟಿಸಿದ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಇದೇ ಸಂದರ್ಭದಲ್ಲಿ ಕಾರ್ಯಕ್ರಮಕ್ಕೆ ಮುನ್ನಾ ಕೂಡ್ಲಿಗಿ ಪಟ್ಟಣದಲ್ಲಿರುವ ಮಹಾತ್ಮ ಗಾಂಧೀಜಿಯವರ ಚಿತಾಭಸ್ಮದ ಸ್ಮಾರಕಕ್ಕೆ ಭೇಟಿ ನೀಡಿದರು. ಈ ಸಂದರ್ಭದಲ್ಲಿ ವಿಜಯನಗರ ಜಿಲ್ಲಾ ಉಸ್ತುವಾರಿ ಸಚಿವರಾದ ಬಸವಂತಪ್ಪ ಹಾಗೂ ಸ್ಥಳೀಯ ಶಾಸಕರಾದ ಎನ್ .ಟಿ ಶ್ರೀನಿವಾಸ್ ಸೇರಿದಂತೆ ಜಿಲ್ಲೆಯ ವಿವಿಧ ವಿಧಾನಸಭಾ ಕ್ಷೇತ್ರಗಳ ಶಾಸಕರು, ಸಂಸತ್ ಸದಸ್ಯರು ಹಾಗೂ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

## ಇಂದಿನಿಂದ ದಸರಾ ಆನೆಗಳ ತಾಲೀಮು ಆರಂಭ

● ವಿಕ್ರಮ ವಾಹಿನಿ । ಮೈಸೂರು

ವಿಶ್ವವಿಖ್ಯಾತ ಮೈಸೂರು ದಸರಾ ಜಂಬೂಸವಾರಿಗೆ ಸಜ್ಜಾಗುತ್ತಿರುವ ಗಜಪಡೆಗೆ ಇಂದಿನಿಂದ ತಾಲೀಮು ಆರಂಭವಾಗಲಿದೆ. ಅರಮನೆ ಆವರಣದಿಂದ ಬನ್ನಿಮಂಟಪದವರೆಗೆ ಪ್ರತಿದಿನ ಬೆಳಗ್ಗೆ ಮತ್ತು ಸಂಜೆ ಆನೆಗಳಿಗೆ ತಾಲೀಮು ನೀಡಲಾಗುತ್ತದೆ.

ದಸರಾ ಮೆರವಣಿಗೆಯಲ್ಲಿ ಆನೆಗಳು ಯಾವುದೇ ಆತಂಕವಿಲ್ಲದೆ ಸಾಗುವಂತೆ ಅವುಗಳನ್ನು ನಗರದ ವಾತಾವರಣಕ್ಕೆ ಹೊಂದಿಸುವುದು ತಾಲೀಮಿನ ಪ್ರಮುಖ ಉದ್ದೇಶವಾಗಿದೆ. ಮೊದಲ ಹಂತದಲ್ಲಿ ಮೂರುರಿಂದ ನಾಲ್ಕು ಆನೆಗಳಿಗೆ ಹಂತ ಹಂತವಾಗಿ ಭಾರ ಹೊರಿಸುವ ತಾಲೀಮು ನೀಡಲಾಗುತ್ತದೆ. ನಂತರ ಇತರ ಆನೆಗಳಿಗೂ ತಾಲೀಮು ವಿಸ್ತರಿಸಲಾಗುವುದು.

ಅರಮನೆಯಿಂದ ಬನ್ನಿಮಂಟಪದವರೆಗೆ ಸಾಗುವ ಮಾರ್ಗದಲ್ಲಿ ವಾಹನಗಳ ಸಂಚಾರ, ಜನಸಂದಣಿ, ಶಬ್ದ ಸೇರಿದಂತೆ ನಗರದ ವಿವಿಧ ಪರಿಸ್ಥಿತಿಗಳಿಗೆ ಆನೆಗಳನ್ನು ಒಗ್ಗಿಸುವ ಕೆಲಸ ನಡೆಯಲಿದೆ.

ಜಂಬೂಸವಾರಿಯಲ್ಲಿ ಪಾಲ್ಗೊಳ್ಳುವ ಆನೆಗಳ ಆರೋಗ್ಯ ಮತ್ತು ವರ್ತನೆಯನ್ನೂ ಅರಣ್ಯ ಇಲಾಖೆ ಹಾಗೂ ಪಶುವೈದ್ಯರ ತಂಡ ನಿರಂತರವಾಗಿ ಮೇಲ್ವಿಚಾರಣೆ ಮಾಡಲಿದೆ.

## ಟಾರ್ಚ್ ಬೆಳಕಿನಲ್ಲಿ 15 ಕಿ.ಮೀ. ಬಸ್ ಪ್ರಯಾಣ

● ವಿಕ್ರಮ ವಾಹಿನಿ । ಹುಬ್ಬಳ್ಳಿ

ಮಾರ್ಗಮಧ್ಯೆ ಬಸ್‌ನ ಹೆಡ್‌ಲೈಟ್ ಕೆಟ್ಟುಹೋದರೂ ಪ್ರಯಾಣಿಕರನ್ನು ಅರ್ಧಕ್ಕೆ ಇಳಿಸದೆ, ಅವರ ಮೊಬೈಲ್ ಟಾರ್ಚ್‌ಗಳ ಬೆಳಕಿನ ಸಹಾಯದಿಂದ ಚಾಲಕ ಸುಮಾರು 15 ಕಿ.ಮೀ. ದೂರ ಬಸ್ ಚಲಾಯಿಸಿ ಎಲ್ಲರನ್ನೂ ಸುರಕ್ಷಿತವಾಗಿ ತಲುಪಿಸಿದ ಘಟನೆ ಹುಬ್ಬಳ್ಳಿ ಸಮೀಪ ನಡೆದಿದೆ.

ಹುಬ್ಬಳ್ಳಿಯಿಂದ ಅತ್ತಿಗೇರಿಗೆ ತೆರಳುತ್ತಿದ್ದ ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಬಸ್, ಕುಂದಗೋಳ ತಾಲೂಕಿನ ಸಂಶಿ ಬಳಿ ತಾಂತ್ರಿಕ ದೋಷದಿಂದ ಹೆಡ್‌ಲೈಟ್ ಕಳೆದುಕೊಂಡಿದೆ. ರಾತ್ರಿ ವೇಳೆ ಮುಂದಿನ ದಾರಿ ಕಾಣದ ಪರಿಸ್ಥಿತಿ ನಿರ್ಮಾಣವಾದ ಹಿನ್ನೆಲೆಯಲ್ಲಿ ಬಸ್‌ನಲ್ಲಿದ್ದ ಪ್ರಯಾಣಿಕರು ತಮ್ಮ ಮೊಬೈಲ್‌ಗಳ ಟಾರ್ಚ್ ಬೆಳಗಿಸಿ ಚಾಲಕನಿಗೆ ನೆರವಾದರು.

ಈ ಬೆಳಕಿನ ಸಹಾಯದಿಂದ ಚಾಲಕ ಸಂಶಿಯಿಂದ ಗುಡಗೇರಿ ಮೂಲಕ ಅತ್ತಿಗೇರಿವರೆಗೆ ಸುಮಾರು 15 ಕಿ.ಮೀ. ದೂರ ಬಸ್‌ನ್ನು ಅತ್ಯಂತ ನಿಧಾನವಾಗಿ ಚಲಾಯಿಸಿದರು. ಸಾಮಾನ್ಯವಾಗಿ 15–20 ನಿಮಿಷಗಳಲ್ಲಿ ಕ್ರಮಿಸುವ ಮಾರ್ಗವನ್ನು ಸುಮಾರು ಒಂದೂವರೆ ಗಂಟೆಯಲ್ಲಿ ಪೂರ್ಣಗೊಳಿಸಿ, ಪ್ರಯಾಣಿಕರನ್ನು ಸುರಕ್ಷಿತವಾಗಿ ಅವರ ಗಮ್ಯಸ್ಥಾನಗಳಿಗೆ ತಲುಪಿಸಿದರು.

ಘಟನೆ ಗ್ರಾಮೀಣ ಮಾರ್ಗಗಳಲ್ಲಿ ಸಂಚರಿಸುತ್ತಿರುವ ಹಳೆಯ ಬಸ್‌ಗಳ ನಿರ್ವಹಣೆ ಹಾಗೂ ಸುರಕ್ಷತೆ ಕುರಿತು ಸಾರ್ವಜನಿಕರಲ್ಲಿ ಮತ್ತೆ ಆತಂಕ ಮತ್ತು ಆಕ್ರೋಶಕ್ಕೆ ಕಾರಣವಾಗಿದೆ.

## ಹಾಕಿ ಕ್ಲಬ್‌ನಲ್ಲಿ ಜಿರಳೆ, ಕೊಳೆತ ತರಕಾರಿ!

● ವಿಕ್ರಮ ವಾಹಿನಿ । ಬೆಂಗಳೂರು

ಆಹಾರ ಸುರಕ್ಷತಾ ಇಲಾಖೆ ಅಧಿಕಾರಿಗಳು ನಗರದ ವಿವೇಕನಗರದಲ್ಲಿರುವ ಪ್ರತಿಷ್ಠಿತ ಹಾಕಿ ಕ್ಲಬ್ ಮೇಲೆ ದಾಳಿ ನಡೆಸಿ, ಅಡುಗೆಮನೆಯಲ್ಲಿ ತೀವ್ರ ಅನೈರ್ಮಲ್ಯ, ಜಿರಳೆ ಹಾವಳಿ, ಕೊಳೆತ ತರಕಾರಿಗಳು ಹಾಗೂ ಅವಧಿ ಮೀರಿದ ತಂಪು ಪಾನೀಯಗಳು ಪತ್ತೆಹಚ್ಚಿದ್ದಾರೆ. ನಿಯಮ ಉಲ್ಲಂಘನೆ ಹಿನ್ನೆಲೆಯಲ್ಲಿ ಕ್ಲಬ್ ಆಡಳಿತ ಮಂಡಳಿಗೆ ನೋಟಿಸ್ ಜಾರಿ ಮಾಡಲಾಗಿದೆ.

ಆರೋಗ್ಯ ಸಚಿವ ಯು.ಟಿ. ಖಾದರ್ ಅವರ ನಿರ್ದೇಶನದ ಮೇರೆಗೆ ಗ್ರೇಟರ್ ಬೆಂಗಳೂರು ವ್ಯಾಪ್ತಿಯಲ್ಲಿ ಆಹಾರ ಸುರಕ್ಷತಾ ಇಲಾಖೆ ಕಾರ್ಯಾಚರಣೆ ನಡೆಸುತ್ತಿದೆ. ಇದರ ಭಾಗವಾಗಿ ನಡೆದ ತಪಾಸಣೆಯಲ್ಲಿ ಕ್ಲಬ್‌ನ ಅಡುಗೆ ಮನೆಯಲ್ಲಿ ಸ್ವಚ್ಛತೆಯ ಕೊರತೆ ಹಾಗೂ ಕೀಟಗಳ ಹಾವಳಿ ಕಂಡುಬಂದಿದೆ. ಆಹಾರ ತಯಾರಿಸುವ ಸ್ಥಳದಲ್ಲೇ ಜಿರಳೆಗಳು ಓಡಾಡುತ್ತಿರುವುದು ಅಧಿಕಾರಿಗಳ ಗಮನಕ್ಕೆ ಬಂದಿದೆ.

ವೆಜ್ ಮತ್ತು ನಾನ್‌ವೆಜ್ ಆಹಾರ ಪದಾರ್ಥಗಳನ್ನು ಪ್ರತ್ಯೇಕವಾಗಿ ಸಂಗ್ರಹಿಸದೇ ಇರುವುದು ಕೂಡ ಪತ್ತೆಯಾಗಿದೆ. ಮಾಂಸಾಹಾರಿ ಪದಾರ್ಥಗಳ ಜತೆ ಐಸ್‌ಕ್ರೀಂ ಸಂಗ್ರಹಿಸಿದ್ದಲ್ಲದೆ, ಅಡುಗೆಗೆ ಬಳಸಲು ಇರಿಸಿದ್ದ ತರಕಾರಿಗಳು ಕೊಳೆತ ಸ್ಥಿತಿಯಲ್ಲಿದ್ದವು ಎಂದು ಅಧಿಕಾರಿಗಳು ತಿಳಿಸಿದ್ದಾರೆ. ತಪಾಸಣೆ ವೇಳೆ ಮಾರಾಟ ಹಾಗೂ ಬಳಕೆಗೆ ಇಡಲಾಗಿದ್ದ 40 ಅವಧಿ ಮೀರಿದ ತಂಪು ಪಾನೀಯಗಳ ಬಾಟಲಿಗಳನ್ನು ಜಪ್ತಿ ಮಾಡಲಾಗಿದೆ.

ಈ ಲೋಪಗಳ ಹಿನ್ನೆಲೆಯಲ್ಲಿ ಆಹಾರ ಸುರಕ್ಷತೆ ಮತ್ತು ಗುಣಮಟ್ಟ (ಪರವಾನಗಿ ಮತ್ತು ನೋಂದಣಿ) ನಿಯಮಗಳು–2011ರ ಅಡಿಯಲ್ಲಿ ಮುಂದಿನ ಕಾನೂನು ಕ್ರಮ ಕೈಗೊಳ್ಳಲಾಗುತ್ತಿದೆ. ಸಾರ್ವಜನಿಕರ ಆರೋಗ್ಯದ ವಿಚಾರದಲ್ಲಿ ಯಾವುದೇ ರಾಜಿ ಇಲ್ಲ ಎಂದು ಇಲಾಖೆ ಸ್ಪಷ್ಟಪಡಿಸಿದ್ದು, ನಿಯಮ ಉಲ್ಲಂಘಿಸುವ ಆಹಾರ ಘಟಕಗಳ ವಿರುದ್ಧ ಮುಂದೆಯೂ ನಿರಂತರ ತಪಾಸಣೆ ಮತ್ತು ಕಠಿಣ ಕ್ರಮ ಕೈಗೊಳ್ಳುವುದಾಗಿ ಎಚ್ಚರಿಸಿದೆ.

## ಸಾರ್ವಜನಿಕರು ಸರ್ಕಾರಿ ಕಚೇರಿಗಳಿಗೆ ಅಲೆಯುವುದು ತಪ್ಪಲಿದೆ: ಜಿ.ಸಿ.ಚಂದ್ರಶೇಖರ್

● ವಿಕ್ರಮ ವಾಹಿನಿ । ವಿಜಯನಗರ

ಸಾಮಾನ್ಯ ನಾಗರಿಕರು ಹಾಗೂ ಬಡವರು ಸರ್ಕಾರಿ ಸೇವೆ ಮತ್ತು ಕುಂದುಕೊರತೆಗಳ ಪರಿಹಾರಕ್ಕಾಗಿ ಕಚೇರಿಗಳಿಗೆ ಅಲೆಯುವುದನ್ನು ತಪ್ಪಿಸುವ ಉದ್ದೇಶದಿಂದ 'ಪ್ರಜಾಸೇವಾ ಇಲಾಖೆ' ಜಾರಿಗೆ ತರಲಾಗಿದೆ ಎಂದು ಮುಖ್ಯಮಂತ್ರಿ ರಾಜಕೀಯ ಸಲಹೆಗಾರ ಹಾಗೂ ಮಾಜಿ ರಾಜ್ಯಸಭಾ ಸಂಸದ ಜಿ.ಸಿ.ಚಂದ್ರಶೇಖರ್ ಹೇಳಿದರು.

ಕೂಡ್ಲಿಗಿ ಪಟ್ಟಣದಲ್ಲಿ ಶನಿವಾರ ನಡೆದ ಪ್ರಜಾಸೇವಾ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಸಾರ್ವಜನಿಕರಿಗೆ ಮನೆಬಾಗಿಲಿನಲ್ಲೇ ಅಥವಾ ಸಮೀಪದ ಕೇಂದ್ರಗಳಲ್ಲಿ ಸರ್ಕಾರಿ ಸೇವೆಗಳು ಲಭ್ಯವಾಗುವಂತೆ ಸರಳ ವ್ಯವಸ್ಥೆ ಕಲ್ಪಿಸಲಾಗಿದೆ ಎಂದರು.

ಸಾರ್ವಜನಿಕರಿಂದ ಸ್ವೀಕರಿಸುವ ಅರ್ಜಿ ಹಾಗೂ ದೂರುಗಳನ್ನು ಸಂಬಂಧಪಟ್ಟ ಆರೋಗ್ಯ, ಶಿಕ್ಷಣ, ಕಂದಾಯ ಸೇರಿದಂತೆ ವಿವಿಧ ಇಲಾಖೆಗೆ ತಕ್ಷಣ ರವಾನಿಸಿ, ನಿಗದಿತ ಅವಧಿಯಲ್ಲಿ ಪರಿಹಾರ ಒದಗಿಸಲು ನೋಡಲ್ ಅಧಿಕಾರಿಗಳನ್ನು ನೇಮಿಸಲಾಗುತ್ತದೆ. ಇದರಿಂದ ಆಡಳಿತದಲ್ಲಿ ಉತ್ತರದಾಯಿತ್ವ, ಪಾರದರ್ಶಕತೆ ಹಾಗೂ ಜವಾಬ್ದಾರಿ ಹೆಚ್ಚಲಿದೆ ಎಂದು ತಿಳಿಸಿದರು.

ಬಡವರ ಕೆಲಸಗಳು ತ್ವರಿತವಾಗಿ ಹಾಗೂ ನೇರವಾಗಿ ಆಗಬೇಕು. ಅವರ ದುರ್ಬಲತೆಯ ಲಾಭವನ್ನು ಯಾರೂ ಪಡೆಯದಂತೆ ನೋಡಿಕೊಳ್ಳುವುದು ಇಲಾಖೆಯ ಪ್ರಮುಖ ಉದ್ದೇಶವಾಗಿದೆ. ಸರ್ಕಾರದ ವಿವಿಧ ಯೋಜನೆಗಳ ಜೊತೆಗೆ ಇಂತಹ ಆಡಳಿತ ಸುಧಾರಣೆಗಳು ಜನರಿಗೆ ಮತ್ತಷ್ಟು ಅನುಕೂಲ ಕಲ್ಪಿಸಲಿವೆ ಎಂದರು.

ಅಧಿಕಾರದಲ್ಲಿರುವವರು ಹುದ್ದೆಯನ್ನು ಅನುಭವಿಸುವುದಕ್ಕಿಂತ ಜನರ ಸೇವೆಗೆ ಆದ್ಯತೆ ನೀಡಬೇಕು. ಜನರ ಸಮಸ್ಯೆಗಳಿಗೆ ತಕ್ಷಣ ಸ್ಪಂದಿಸುವ ಮೂಲಕ ರಾಜ್ಯದ ಆಡಳಿತ ವ್ಯವಸ್ಥೆಗೆ ಮಾದರಿಯಾಗಬೇಕು ಎಂದು ಜಿ.ಸಿ.ಚಂದ್ರಶೇಖರ್ ಸಲಹೆ ನೀಡಿದರು. 'ಪ್ರಜಾಸೇವಾ ಇಲಾಖೆ' ಸಾರ್ವಜನಿಕರ ಧ್ವನಿಯಾಗಿ ಕಾರ್ಯನಿರ್ವಹಿಸುವುದರೊಂದಿಗೆ, ಸರ್ಕಾರಿ ಸೇವೆಗಳನ್ನು ಜನರ ಬಳಿಗೆ ಕೊಂಡೊಯ್ಯುವಲ್ಲಿ ಮಹತ್ವದ ಪಾತ್ರ ವಹಿಸಲಿದೆ ಎಂದು ಅವರು ಆಶಯ ವ್ಯಕ್ತಪಡಿಸಿದರು.

## ಕೂಡ್ಲಿಗಿ, ಕೊಟ್ಟೂರು ಬರಪೀಡಿತ ಘೋಷಣೆಗೆ ಮನವಿ

● ವಿಕ್ರಮ ವಾಹಿನಿ । ವಿಜಯನಗರ

ತೀವ್ರ ಮಳೆ ಅಭಾವ ಹಾಗೂ ಭೀಕರ ಬರಗಾಲದಿಂದ ಕಂಗಾಲಾಗಿರುವ ಕೂಡ್ಲಿಗಿ ಮತ್ತು ಕೊಟ್ಟೂರು ತಾಲೂಕುಗಳನ್ನು ತಕ್ಷಣವೇ 'ಬರಪೀಡಿತ ತಾಲೂಕುಗಳು' ಎಂದು ಸರ್ಕಾರ ಅಧಿಕೃತವಾಗಿ ಘೋಷಿಸಬೇಕು ಎಂದು ಶಾಸಕ ಎನ್.ಟಿ.ಶ್ರೀನಿವಾಸ್ ನಾಯಕ್ ಮುಖ್ಯಮಂತ್ರಿಗಳಿಗೆ ಮನವಿ ಮಾಡಿದರು.



ಕೂಡ್ಲಿಗಿ ಪಟ್ಟಣದಲ್ಲಿ ಆಯೋಜಿಸಲಾಗಿದ್ದ 'ಪ್ರಜಾಸೇವಾ' ಅಭಿಯಾನಕ್ಕೆ ಚಾಲನೆ ನೀಡುವ ಕಾರ್ಯಕ್ರಮದಲ್ಲಿ ಅಧ್ಯಕ್ಷತೆವಹಿಸಿ ಪ್ರಾಸ್ತಾವಿಕವಾಗಿ ಮಾತನಾಡಿದ ಅವರು ತಾಲೂಕಿನ ಬರ ಪರಿಸ್ಥಿತಿಯನ್ನು ಪ್ರಮುಖವಾಗಿ ಪ್ರಸ್ತಾಪಿಸಿ ಸರ್ಕಾರದ ಗಮನ ಸೆಳೆದರು.

ಕ್ಷೇತ್ರದ ಭೀಕರ ಪರಿಸ್ಥಿತಿಯನ್ನು ತೆರೆದಿಟ್ಟ ಶಾಸಕರು, "ಈ ಬಾರಿಯ ತೀವ್ರ ಬರದಿಂದಾಗಿ ತಾಲೂಕಿನ ರೈತರು, ಕೂಲಿ ಕಾರ್ಮಿಕರು ಹಾಗೂ ಸಾರ್ವಜನಿಕರು ಬದುಕಿನ ಭರವಸೆಯನ್ನೇ ಕಳೆದುಕೊಂಡು ಸಂಕಷ್ಟದಲ್ಲಿದ್ದಾರೆ. ತಾಲೂಕಿನ ರೈತ ಸಂಘಟನೆಗಳು, ಕನ್ನಡಪರ ಸಂಘಟನೆಗಳು ಹಾಗೂ ಸರ್ವಪಕ್ಷಗಳ ನಾಯಕರು ಒಗ್ಗಟ್ಟಿನಿಂದ ಬರ ಘೋಷಣೆಗೆ ಆಗ್ರಹಿಸುತ್ತಿದ್ದಾರೆ ಎಂದರು.

ರೈತರ ಕಣ್ಣೀರು ಒರೆಸಲು ರಾಜ್ಯ ಸರ್ಕಾರ ಕೂಡಲೇ ಸ್ಪಂದಿಸಿ, ಕೂಡ್ಲಿಗಿ ಮತ್ತು ಕೊಟ್ಟೂರು ತಾಲೂಕುಗಳನ್ನು ಬರಪೀಡಿತ ಎಂದು ಘೋಷಿಸಿ ತುರ್ತು ಆರ್ಥಿಕ ನೆರವು ಹಾಗೂ ಬರ ಪರಿಹಾರ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಬೇಕು" ಎಂದು ವೇದಿಕೆಯಲ್ಲಿದ್ದ ಮುಖ್ಯಮಂತ್ರಿಗಳಿಗೆ, ಸಚಿವರಿಗೆ ಹಾಗೂ ಹಿರಿಯ ಅಧಿಕಾರಿಗಳಲ್ಲಿ ಮನವಿ ಮಾಡಿದರು.

ಇದೇ ವೇಳೆ 'ಪ್ರಜಾಸೇವಾ' ಯೋಜನೆಯ ಮಹತ್ವವನ್ನು ವಿವರಿಸಿದ ಅವರು, ಪಕ್ಷಾತೀತ ಹಾಗೂ ಜಾತ್ಯಾತೀತವಾಗಿ ಸಾರ್ವಜನಿಕರ, ನಿರುದ್ಯೋಗಿ ಯುವಕರ, ಶಾಲಾ–ಕಾಲೇಜುಗಳ, ಸ್ವಸಹಾಯ ಸಂಘಗಳ ಹಾಗೂ ನಿವೃತ್ತರ ಕುಂದುಕೊರತೆಗಳಿಗೆ ಕಾಲಮಿತಿಯಲ್ಲಿ ಪರಿಹಾರ ಒದಗಿಸುವ ಈ ಯೋಜನೆ ಒಂದು ಐತಿಹಾಸಿಕ ಮೈಲಿಗಲ್ಲು. ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ನೇತೃತ್ವದಲ್ಲಿ 50ಕ್ಕೂ ಹೆಚ್ಚು ಇಲಾಖೆಗಳನ್ನು ಒಗೂಡಿಸಿ ಜನರ ಮನೆಬಾಗಿಲಿಗೇ ಆಡಳಿತ ತಲುಪಿಸುವ ಕೆಲಸವಾಗುತ್ತಿದೆ ಎಂದರು.

ತಮ್ಮ ತಂದೆ ಎನ್ . ಟಿ. ಬೊಮ್ಮಣ್ಣ ಅವರ ಜನಸೇವೆಯನ್ನು ಸ್ಮರಿಸಿದ ಶಾಸಕರು, "ಮನೆ ಬಾಗಿಲಿಗೆ ಸರ್ಕಾರ" ಎಂಬ ಪರಿಕಲ್ಪನೆ ತಮಗೆ ಹೊಸದಲ್ಲ ಎಂದರಲ್ಲದೆ, ಕಳೆದ ಮೂರು ವರ್ಷಗಳಲ್ಲಿ ತಾಲೂಕಿನ ಆರೋಗ್ಯ, ಕುಡಿಯುವ ನೀರು, ನೂತನ ಆಸ್ಪತ್ರೆ ಹಾಗೂ ರಸ್ತೆ ಸಂಪರ್ಕದಂತಹ ಮೂಲಸೌಕರ್ಯಗಳಿಗೆ ನೀಡಿದ ಆದ್ಯತೆಯನ್ನು ವಿವರಿಸಿದರು.

ಕೂಡ್ಲಿಗಿಯಿಂದ ಚಾಲನೆ ಪಡೆದ ಈ 'ಪ್ರಜಾಸೇವಾ' ಅಭಿಯಾನದ ಮೊದಲ ಫಲವಾಗಿ ಕ್ಷೇತ್ರಕ್ಕೆ ಬರ ಪರಿಹಾರ ಸಿಗಬೇಕೆಂಬುದು ಜನರ ಆಶಯವಾಗಿದೆ ಎಂದು ಹೇಳಿದರು.

## ಸರ್ಕಾರಿ ವಿಮೆಯಡಿ IVF ಚಿಕಿತ್ಸೆ: ರೂ 1.20 ಲಕ್ಷದವರೆಗೆ ಸೌಲಭ್ಯ

● ವಿಕ್ರಮ ವಾಹಿನಿ । ಬೆಂಗಳೂರು

ಮಕ್ಕಳಾಗದೆ ಸಂಕಷ್ಟದಲ್ಲಿರುವ ಬಡ ಹಾಗೂ ಮಧ್ಯಮ ವರ್ಗದ ದಂಪತಿಗಳಿಗೆ ರಾಜ್ಯ ಸರ್ಕಾರ ಮಹತ್ವದ ನೆರವು ನೀಡಲು ಮುಂದಾಗಿದೆ. ಆಯುಷ್ಮಾನ್ ಭಾರತ್ ಆರೋಗ್ಯ ಕರ್ನಾಟಕ (ಎಬಿಎಚ್‌ಕೆ) ಯೋಜನೆಯಡಿ ಇನ್ಮುಂದೆ ಐವಿಎಫ್ (ಇನ್ ವಿಟ್ರೊ ಫರ್ಟಿಲೈಸೇಶನ್) ಚಿಕಿತ್ಸೆಯನ್ನು ಒದಗಿಸಲು ಸರ್ಕಾರ ನಿರ್ಧರಿಸಿದ್ದು, ಅರ್ಹ ಫಲಾನುಭವಿಗಳಿಗೆ ರೂ 1.20 ಲಕ್ಷದವರೆಗೆ ವಿಮಾ ಸೌಲಭ್ಯ ದೊರೆಯಲಿದೆ.

ದುಬಾರಿ ಚಿಕಿತ್ಸೆಯಾಗಿರುವ ಐವಿಎಫ್ ಅನ್ನು ಸರ್ಕಾರಿ ವಿಮಾ ಯೋಜನೆಯ ವ್ಯಾಪ್ತಿಗೆ ತರುವ ಮೂಲಕ ಹಣಕಾಸಿನ ಸಮಸ್ಯೆಯಿಂದ ಚಿಕಿತ್ಸೆ ಪಡೆಯಲು ಸಾಧ್ಯವಾಗದ ದಂಪತಿಗಳಿಗೆ ನೆರವು ನೀಡುವುದು ಸರ್ಕಾರದ ಉದ್ದೇಶವಾಗಿದೆ. ನೂತನ ವ್ಯವಸ್ಥೆಯಡಿ ಅರ್ಹರು ಸರ್ಕಾರಿ ಯೋಜನೆಯಡಿ ಗುರುತಿಸಲಾದ ಖಾಸಗಿ ಆಸ್ಪತ್ರೆಗಳಲ್ಲಿಯೂ ಚಿಕಿತ್ಸೆ ಪಡೆಯಲು ಅವಕಾಶ ಕಲ್ಪಿಸಲಾಗುತ್ತದೆ.

### ದುಬಾರಿ ಚಿಕಿತ್ಸೆ ಈಗ ಕೈಗೆಟುಕುವ ನಿರೀಕ್ಷೆ

ಮಕ್ಕಳಾಗದ ದಂಪತಿಗಳು ವಿವಿಧ ಕಾರಣಗಳಿಂದ ಐವಿಎಫ್ ಚಿಕಿತ್ಸೆಯ ಮೊರೆ ಹೋಗುತ್ತಿದ್ದಾರೆ. ಆದರೆ ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆಗೆ ಹೆಚ್ಚಿನ ವೆಚ್ಚ ತಗಲುವುದರಿಂದ ಬಡ ಮತ್ತು ಮಧ್ಯಮ ವರ್ಗದ ಕುಟುಂಬಗಳಿಗೆ ಇದು ಆರ್ಥಿಕ ಹೊರೆಯಾಗುತ್ತಿದೆ. ಈ ಹಿನ್ನೆಲೆಯಲ್ಲಿ ಐವಿಎಫ್ ಚಿಕಿತ್ಸೆಗೆ ರೂ 1.20 ಲಕ್ಷದವರೆಗೆ ವಿಮಾ ಮೊತ್ತದ ಮಿತಿ ನಿಗದಿಪಡಿಸಿರುವುದು ಹಲವು ಕುಟುಂಬಗಳಿಗೆ ನೆರವಾಗುವ ನಿರೀಕ್ಷೆಯಿದೆ.

ನೈಸರ್ಗಿಕವಾಗಿ ಗರ್ಭಧಾರಣೆ ಸಾಧ್ಯವಾಗದ ದಂಪತಿಗಳಿಗೆ ವೈದ್ಯಕೀಯ ನೆರವಿನಿಂದ ಗರ್ಭಧಾರಣೆ ಸಾಧ್ಯವಾಗಿಸುವ ಚಿಕಿತ್ಸಾ ವಿಧಾನವೇ ಐವಿಎಫ್. ಮಹಿಳೆಯ ಅಂಡಾಣು ಮತ್ತು ಪುರುಷನ ವೀರ್ಯಾಣುವನ್ನು ಪಡೆದು ಪ್ರಯೋಗಾಲಯದಲ್ಲಿ ಫಲೀಕರಣಗೊಳಿಸಲಾಗುತ್ತದೆ. ಬಳಿಕ ರೂಪುಗೊಂಡ ಭ್ರೂಣವನ್ನು ಮಹಿಳೆಯ ಗರ್ಭಾಶಯಕ್ಕೆ ವರ್ಗಾಯಿಸಲಾಗುತ್ತದೆ.

ರಾಜ್ಯದಲ್ಲಿ ಮೊದಲ ಬಾರಿಗೆ ಸರ್ಕಾರಿ ಆರೋಗ್ಯ ವಿಮಾ ಯೋಜನೆಯಡಿ ಈ ಚಿಕಿತ್ಸೆಗೆ ಅವಕಾಶ ಕಲ್ಪಿಸುವ ಕ್ರಮವು ಮಕ್ಕಳಿಗಾಗಿ ಕಾಯುತ್ತಿರುವ ಆರ್ಥಿಕವಾಗಿ ಹಿಂದುಳಿದ ಕುಟುಂಬಗಳಿಗೆ ಹೊಸ ಭರವಸೆ ಮೂಡಿಸಿದೆ.

ಈ ಸೌಲಭ್ಯ ಪಡೆಯಲು ಅರ್ಹತೆ, ಚಿಕಿತ್ಸೆ ಪಡೆಯಬಹುದಾದ ಆಸ್ಪತ್ರೆಗಳು ಹಾಗೂ ವಿಮಾ ಯೋಜನೆಯಡಿ ಒಳಪಡುವ ಚಿಕಿತ್ಸಾ ಕ್ರಮಗಳ ಕುರಿತು ಆರೋಗ್ಯ ಇಲಾಖೆ ಶೀಘ್ರದಲ್ಲೇ ಸ್ಪಷ್ಟ ಮಾರ್ಗಸೂಚಿಗಳನ್ನು ಪ್ರಕಟಿಸುವ ನಿರೀಕ್ಷೆಯಿದೆ. ಯೋಜನೆಯ ಪ್ರಯೋಜನ ಅರ್ಹ ದಂಪತಿಗಳಿಗೆ ತಲುಪುವಂತೆ ಆಸ್ಪತ್ರೆಗಳಿಗೆ ಅಗತ್ಯ ಸೂಚನೆಗಳನ್ನು ನೀಡಲಾಗುವುದು ಎಂದು ಇಲಾಖೆ ತಿಳಿಸಿದೆ.

## ವಿಜಯಾನಂದ ಟ್ರಾವೆಲ್ಸ್‌ನಿಂದ ಹೊಸ ದಾಖಲೆ; ದೇಶಾದ್ಯಂತ ಪ್ರೀಮಿಯಂ ಸೇವೆ ವಿಸ್ತರಣೆ


● ವಿಕ್ರಮ ವಾಹಿನಿ । ಬೆಂಗಳೂರು

ವಿಜಯಾನಂದ ಟ್ರಾವೆಲ್ಸ್ ಪ್ರೈ.ಲಿ. (ವಿಟಿಪಿಎಲ್) ಒಂದೇ ಆರ್ಡರ್‌ನಲ್ಲಿ 150 ವೋಲ್ವೋ–9600 ಐಷಾರಾಮಿ ಸ್ಲೀಪರ್ ಕೋಚ್‌ಗಳನ್ನು ಖರೀದಿಸುವ ಮೂಲಕ ಹೊಸ ದಾಖಲೆ ನಿರ್ಮಿಸಿದೆ. ಖಾಸಗಿ ಟ್ರಾವೆಲ್ಸ್ ಸಂಸ್ಥೆಯೊಂದು ವೋಲ್ವೋ ಬಸ್‌ಗಳಿಗೆ ನೀಡಿರುವ ಅತಿದೊಡ್ಡ ಏಕ ಆರ್ಡರ್ ಇದಾಗಿದೆ.

ನಗರದಲ್ಲಿ ನಡೆದ ಸಮಾರಂಭದಲ್ಲಿ ವೋಲ್ವೋ ಸಂಸ್ಥೆಯ ಎಂಡಿ ಹಾಗೂ ಸಿಇಒ ಬಿ. ಶ್ರೀನಿವಾಸ್ ಅವರು ವಿಆರ್‌ಎಲ್ ಮೀಡಿಯಾ ವ್ಯವಸ್ಥಾಪಕ ನಿರ್ದೇಶಕ ಡಾ. ಆನಂದ ಸಂಕೇಶ್ವರ ಹಾಗೂ ವಿಜಯಾನಂದ ಟ್ರಾವೆಲ್ಸ್ ವ್ಯವಸ್ಥಾಪಕ ನಿರ್ದೇಶಕ ಶಿವಾ ಸಂಕೇಶ್ವರ ಅವರಿಗೆ ಬಸ್‌ಗಳ ಕೀ ಹಸ್ತಾಂತರಿಸಿದರು.

ಡಾ. ಆನಂದ ಸಂಕೇಶ್ವರ ಮಾತನಾಡಿ, 1996ರಲ್ಲಿ ಆರಂಭವಾದ ವಿಜಯಾನಂದ ಟ್ರಾವೆಲ್ಸ್ 2007ರಿಂದ ವೋಲ್ವೋ ಜತೆ ಪಾಲುದಾರಿಕೆ ಹೊಂದಿದೆ. ಆರಂಭದಲ್ಲಿ 20 ಬಸ್‌ಗಳಿಂದ ಆರಂಭಿಸಿ, 2012ರಲ್ಲಿ 100 ಬಸ್‌ಗಳಿಗೆ ಆರ್ಡರ್ ನೀಡಲಾಗಿತ್ತು. ಇದೀಗ 150 ಬಸ್‌ಗಳನ್ನು ಖರೀದಿಸಲಾಗಿದ್ದು, ರಾಜ್ಯ ಹಾಗೂ ದೇಶಾದ್ಯಂತ ಪ್ರೀಮಿಯಂ ಬಸ್ ಸೇವೆಯನ್ನು ವಿಸ್ತರಿಸುವ ಗುರಿ ಹೊಂದಲಾಗಿದೆ ಎಂದರು.

ವೋಲ್ವೋ 9600 ಕೋಚ್‌ಗಳಲ್ಲಿ ವಿಮಾನ ಮಾದರಿಯ ಶೌಚಾಲಯ, ಆರಾಮದಾಯಕ ಸ್ಲೀಪರ್ ಸೀಟುಗಳು, ಪ್ರತ್ಯೇಕ ಯುಎಸ್‌ಬಿ ಚಾರ್ಜಿಂಗ್, ಎಸಿ ಲೌವರ್, ರೀಡಿಂಗ್ ಲೈಟ್, ವಿಶಾಲ ಲಗೇಜ್ ವಿಭಾಗ ಹಾಗೂ ಪೂರ್ಣ ಏರ್ ಸಸ್ಪೆನ್ಷನ್ ವ್ಯವಸ್ಥೆ ಇದೆ. ಎಬಿಎಸ್, ಇಬಿಎಸ್ ಮತ್ತು ಎಲೆಕ್ಟ್ರಾನಿಕ್ ವೆಹಿಕಲ್ ಸ್ಟೆಬಿಲಿಟಿ ಕಂಟ್ರೋಲ್‌ನಂತಹ ಸುರಕ್ಷತಾ ವ್ಯವಸ್ಥೆಗಳನ್ನೂ ಅಳವಡಿಸಲಾಗಿದೆ.




ಶಿವಾ ಸಂಕೇಶ್ವರ ಮಾತನಾಡಿ, ವೋಲ್ವೋ 9600 ಬಸ್‌ಗಳು ವಿನ್ಯಾಸ, ಸುರಕ್ಷತೆ ಹಾಗೂ ಪ್ರಯಾಣಿಕರ ಸೌಕರ್ಯದಲ್ಲಿ ವಿಶಿಷ್ಟವಾಗಿವೆ. ವಿಶೇಷವಾಗಿ ದೂರದ ಪ್ರಯಾಣಿಕರನ್ನು ಗಮನದಲ್ಲಿಟ್ಟುಕೊಂಡು ಬಸ್‌ಗಳಲ್ಲಿ ಅತ್ಯಾಧುನಿಕ ಸೌಲಭ್ಯಗಳನ್ನು ಕಲ್ಪಿಸಲಾಗಿದೆ. ಹೊಸ ಬಸ್‌ಗಳ ಸೇರ್ಪಡೆಯಿಂದ ಪ್ರಯಾಣಿಕರಿಗೆ ಮತ್ತಷ್ಟು ಆರಾಮದಾಯಕ ಮತ್ತು ಸುರಕ್ಷಿತ ಪ್ರಯಾಣದ ಅನುಭವ ದೊರೆಯಲಿದೆ ಎಂದರು. ವೋಲ್ವೋ ಸಂಸ್ಥೆಯ ಬಿ. ಶ್ರೀನಿವಾಸ್ ಮಾತನಾಡಿ, ವಿಜಯಾನಂದ ಟ್ರಾವೆಲ್ಸ್ ದೀರ್ಘಕಾಲೀನ ಪಾಲುದಾರರಾಗಿದ್ದು, 150 ಬಸ್‌ಗಳ ಈ ಆರ್ಡರ್ ಸುರಕ್ಷತೆ, ತಂತ್ರಜ್ಞಾನ ಮತ್ತು ಗುಣಮಟ್ಟದ ಮೇಲಿನ ವಿಶ್ವಾಸಕ್ಕೆ ಸಾಕ್ಷಿಯಾಗಿದೆ ಎಂದರು.

## 'ನಾಡಿನ ದೊರೆ' ಎನ್ನಬೇಡಿ, 'ಪ್ರಜಾಸೇವಕ' ಎನ್ನಿ: ಡಿ.ಕೆ. ಶಿವಕುಮಾರ್

● ವಿಕ್ರಮ ವಾಹಿನಿ । ವಿಜಯನಗರ

"ನಮ್ಮ ದೇಶದಲ್ಲಿ ಪ್ರಭುಗಳ ಕಾಲ ಮುಗಿದು ಪ್ರಜಾಪ್ರಭುತ್ವ ಬಂದಿದೆ. ನನ್ನನ್ನು 'ನಾಡಿನ ದೊರೆ' ಎನ್ನುವ ಬದಲು 'ಪ್ರಜಾಸೇವಕ' ಎಂದು ಕರೆದರೆ ಹೆಚ್ಚು ಸಂತೋಷವಾಗುತ್ತದೆ," ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

ಕೂಡ್ಲಿಗಿಯಲ್ಲಿ ಶನಿವಾರ ನೂತನ 'ಪ್ರಜಾಸೇವಾ ಇಲಾಖೆ' ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಜನರು ತಮ್ಮ ಕೆಲಸಗಳಿಗಾಗಿ ಸರ್ಕಾರಿ ಕಚೇರಿಗಳಿಗೆ ಅಲೆಯುವ ವ್ಯವಸ್ಥೆಗೆ ಅಂತ್ಯ ಹಾಡಿ, ಆಡಳಿತವನ್ನು ನೇರವಾಗಿ ಜನರ ಮನೆಬಾಗಿಲಿಗೆ ಕೊಂಡೊಯ್ಯುವುದು ಯೋಜನೆಯ ಉದ್ದೇಶ ಎಂದರು.

ಸಚಿವರು, ಶಾಸಕರು ಹಾಗೂ ಅಧಿಕಾರಿಗಳು ಪ್ರತಿ ತಿಂಗಳ ಮೊದಲ ಮತ್ತು ಮೂರನೇ ಶನಿವಾರ ಜನರ ಬಳಿಗೆ ತೆರಳಿ ಅಹವಾಲುಗಳನ್ನು ಸ್ವೀಕರಿಸಿ ಪರಿಹರಿಸಬೇಕು. ಶಾಸಕರು ಹಾಜರಿಲ್ಲದಿದ್ದರೆ ಅಧಿಕಾರಿಗಳೇ ಪಂಚಾಯಿತಿ ಕೇಂದ್ರಗಳಿಗೆ ತೆರಳಿ ಸಭೆ ನಡೆಸಿ ಜನರ ಸಮಸ್ಯೆಗಳನ್ನು ಆಲಿಸಬೇಕು ಎಂದು ಸೂಚಿಸಲಾಗಿದೆ ಎಂದರು.

"ಅರ್ಜಿಗಳನ್ನು ಸ್ವೀಕರಿಸುವುದಷ್ಟೇ ಮುಖ್ಯವಲ್ಲ; ಜನರಿಗೆ ಸೂಕ್ತ ಪರಿಹಾರ ದೊರೆತಾಗ ಮಾತ್ರ ಯೋಜನೆಯ ಯಶಸ್ಸು ಸಾಧ್ಯ. ಪಿಂಚಣಿ, ಭೂಮಿ ವಿವಾದ, ಖಾತೆ ಬದಲಾವಣೆ, ಗ್ಯಾರಂಟಿ ಯೋಜನೆ, ಮನೆ–ನಿವೇಶನ ಸೇರಿದಂತೆ ವಿವಿಧ ಅರ್ಜಿಗಳನ್ನು ಸ್ಥಳದಲ್ಲೇ ಪರಿಶೀಲಿಸಿ ಪರಿಹಾರ ಕಲ್ಪಿಸಲಾಗುವುದು," ಎಂದು ತಿಳಿಸಿದರು.



ಬಡವರು ಹಾಗೂ ದುರ್ಬಲ ವರ್ಗದವರು ಕಂದಾಯ ನ್ಯಾಯಾಲಯಗಳಲ್ಲಿ ಹೋರಾಡಲು ಸಾಧ್ಯವಾಗದ ಸಂದರ್ಭದಲ್ಲಿ ಉಚಿತ ಕಾನೂನು ನೆರವು ಹಾಗೂ ವಕೀಲರ ಸೇವೆ ಒದಗಿಸಲಾಗುವುದು. ಅರ್ಜಿ ತಿರಸ್ಕೃತವಾದರೆ ಕಾರಣವನ್ನು ಸ್ಪಷ್ಟವಾಗಿ ತಿಳಿಸಲಾಗುವುದು. ಪರಿಹಾರ ಸಿಗುವವರೆಗೂ ಸರ್ಕಾರ ಅರ್ಜಿದಾರರ ಬೆನ್ನಿಗೆ ನಿಲ್ಲಲಿದೆ ಎಂದು ಭರವಸೆ ನೀಡಿದರು.

### ಗ್ರಾಮೀಣ ವಿದ್ಯಾರ್ಥಿಗಳಿಗೆ ಆದ್ಯತೆ

ಶಿಕ್ಷಕರನ್ನು ಗೌರವಿಸುವ ಉದ್ದೇಶದಿಂದ ಅವರ ಹೆಸರಿನ ಮುಂದೆ 'ಟೀಚರ್' ಎಂಬ ಗೌರವ ಸೂಚಕ ಬಳಸುವ ಕುರಿತು ಸಂಪುಟ ಸಭೆಯಲ್ಲಿ ಚರ್ಚಿಸಿ ನಿರ್ಧಾರ ಕೈಗೊಳ್ಳಲಾಗುವುದು ಎಂದ ಮುಖ್ಯಮಂತ್ರಿ, ಸರ್ಕಾರಿ ಹಾಗೂ ಗ್ರಾಮೀಣ ಶಾಲೆಗಳಲ್ಲಿ ಓದಿದ ಮಕ್ಕಳಿಗೆ ಸರ್ಕಾರಿ ಉದ್ಯೋಗದಲ್ಲಿ ಶೇ.7.5ರಷ್ಟು ಆಂತರಿಕ ಮೀಸಲಾತಿ ನೀಡುವ ಕುರಿತು ಸರ್ಕಾರ ಚಿಂತನೆ ನಡೆಸುತ್ತಿದೆ ಎಂದು ಹೇಳಿದರು.

### ಮನೆಬಾಗಿಲಿಗೆ ಇ–ಖಾತೆ

ಪ್ರತಿಯೊಬ್ಬರ ಆಸ್ತಿಗೆ ಭದ್ರತೆ ಕಲ್ಪಿಸುವುದು ಸರ್ಕಾರದ ಕರ್ತವ್ಯ. 'ಭೂಮಿ ಗ್ಯಾರಂಟಿ' ಯೋಜನೆಯಡಿ ಕೂಡ್ಲಿಗಿ ತಾಲೂಕಿನಲ್ಲಿ ಈಗಾಗಲೇ 25,276 ಮಂದಿಗೆ ಹಕ್ಕುಪತ್ರ ನೀಡಲಾಗಿದೆ. ಆಸ್ತಿಗಳ ಅಳತೆ ಮಾಡಿ, ಮಾಲೀಕರ ಭಾವಚಿತ್ರದೊಂದಿಗೆ ಇ–ಖಾತೆ ದಾಖಲೆಗಳನ್ನು ಮನೆಬಾಗಿಲಿಗೆ ತಲುಪಿಸುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದರು.

ಗ್ರಾಮೀಣ ಪ್ರದೇಶಗಳಲ್ಲಿ ಸಾಂಸ್ಕೃತಿಕ, ಕ್ರೀಡಾ ಹಾಗೂ ನಾಯಕತ್ವದ ಪ್ರತಿಭೆಗಳನ್ನು ಗುರುತಿಸಿ ಪ್ರೋತ್ಸಾಹಿಸಲು 'ಭಾರತ್ ಜೋಡೋ ಯುವಕ ಸಂಘ'ಗಳನ್ನು ಆರಂಭಿಸಲಾಗುವುದು. ಪ್ರತಿ ಪಂಚಾಯಿತಿಯಲ್ಲೂ ಗ್ಯಾರಂಟಿ ಯೋಜನೆಗಳ ಸಮಿತಿಗಳನ್ನು ರಚಿಸಿ ಜನರಿಗೆ ನ್ಯಾಯ ಒದಗಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

### ತಿಂಗಳಾಂತ್ಯಕ್ಕೆ ಬರಪೀಡಿತ ತಾಲೂಕುಗಳ ಘೋಷಣೆ

ರಾಜ್ಯದಲ್ಲಿ ಬರ ಪರಿಸ್ಥಿತಿಯ ಕುರಿತು ಎರಡನೇ ಹಂತದ ಸಮೀಕ್ಷೆ ನಡೆಯುತ್ತಿದ್ದು, 50ಕ್ಕೂ ಹೆಚ್ಚು ತಾಲೂಕುಗಳಲ್ಲಿ ಪರಿಶೀಲನೆ ಪ್ರಗತಿಯಲ್ಲಿದೆ. ಮಳೆ ಪ್ರಮಾಣ ಸೇರಿದಂತೆ ನಿಗದಿತ ಮಾನದಂಡಗಳನ್ನು ಪರಿಶೀಲಿಸಿ, ಈ ತಿಂಗಳ ಅಂತ್ಯದೊಳಗೆ ಅಗತ್ಯವಿರುವ ತಾಲೂಕುಗಳನ್ನು ಬರಪೀಡಿತ ಎಂದು ಘೋಷಿಸಲಾಗುವುದು ಎಂದು ಮುಖ್ಯಮಂತ್ರಿ ಹೇಳಿದರು.

"ಹೆಲಿಕಾಪ್ಟರ್‌ನಲ್ಲಿ ಬರ ಪರಿಶೀಲನೆ ನಡೆಸುತ್ತಿರುವ ಬಗ್ಗೆ ಟೀಕೆಗಳಿಗೆ ತಲೆಕೆಡಿಸಿಕೊಳ್ಳುವುದಿಲ್ಲ. ಟೀಕೆಗಳು ಮರೆಯಾಗುತ್ತವೆ; ನಾವು ಮಾಡಿದ ಕೆಲಸಗಳು ಉಳಿಯುತ್ತವೆ. ಜನರ ಬಳಿಗೆ ಆಡಳಿತವನ್ನು ಕೊಂಡೊಯ್ಯುವುದೇ ಸರ್ಕಾರದ ಮೂಲ ಉದ್ದೇಶ," ಎಂದು ಅವರು ಹೇಳಿದರು.



ಕಾರ್ಯಕ್ರಮದಲ್ಲಿ ಸಚಿವ ಕೆ.ಎಸ್. ಬಸವಂತಪ್ಪ, ಸಂಸದರಾದ ಇ. ತುಕಾರಾಂ, ಡಾ. ಪ್ರಭಾ ಮಲ್ಲಿಕಾರ್ಜುನ್, ಶಾಸಕರಾದ ಎಚ್.ಆರ್. ಗವಿಯಪ್ಪ, ಕೆ. ನೇಮಿರಾಜ್ ನಾಯಕ್, ಎಲ್. ಕೃಷ್ಣನಾಯಕ್, ಎಂ.ಪಿ. ಲತಾ ಮಲ್ಲಿಕಾರ್ಜುನ್ ಸೇರಿದಂತೆ ಹಲವು ಜನಪ್ರತಿನಿಧಿಗಳು ಹಾಗೂ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು. ಕಾರ್ಯಕ್ರಮದ ಬಳಿಕ ವಿವಿಧ ಯೋಜನೆಗಳ ಫಲಾನುಭವಿಗಳಿಗೆ ಚೆಕ್ ಹಾಗೂ ದಿವ್ಯಾಂಗರಿಗೆ ವಾಹನ ವಿತರಿಸಲಾಯಿತು.

Vikrama Vahini Kannada Daily, #204, Forest Layout, Jnanabharathi, Bangalore-560095
PRGI NO: KARKAN/2018/78481 vikramavahini@gmail.com
93535 91145
Printed by B.N. Murali Prasad, Published by Swarna Latha B.N., and Printed at Swarna Graphics, Forest Layout, Jnanabharathi, Bangalore -560059 and Published at Bangalore, Editor: B.N. Murali Prasad., Volume:9, Issue : 157,